# ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯ್ದೆ 2008ರ ಯೋಜನೆಗಳು ಮತ್ತು ಕಾರ್ಮಿಕ ಕಲ್ಯಾಣ ಯೋಜನೆಗಳ ಬಗ್ಗೆ

## ಮಾಹಿತಿ ಕೈಪಿಡಿ


ಸಿದ್ಧಪಡಿಸಿದವರು

**ಶ್ರೀ ರಾಮಾಂಜಿ ಕೆ ಮತ್ತು ಶ್ರೀ ವೀರೇಶ್ ಎ.ಎಂ**

**ಪ್ರಾಯೋಜನೆಯ ಸಂಯೋಜಕರು**

ಮಾರ್ಗದರ್ಶನ

**ಶ್ರೀಮತಿ ಕಾತ್ಯಾಯಿನಿ ಚಾಮಾರಾಜ್, ಕಾರ್ಯನಿರ್ವಾಹಕ ಟ್ರಸ್ಟಿ – ಸಿವಿಕ್ ಬೆಂಗಳೂರು**

**ಶ್ರೀ ಮಧುಸೂದನ್, ಮುಖ್ಯ ಸಂಯೋಜಕರು – ಸಿವಿಕ್ ಬೆಂಗಳೂರು**



CIVIC BANGALORE

CITIZENS VOLUNTARY INITIATIVE FOR THE CITY

**ಸಿವಿಕ್ ಬೆಂಗಳೂರು**

ನಂ.6, ಕಸ್ತೂರಿ ಅಪಾರ್ಟ್‌ಮೆಂಟ್,35/23. ಲ್ಯಾಂಗ್‌ಪೋರ್ಡ್ ರಸ್ತೆ ತಿರುವು,

ಶಾಂತಿನಗರ, ಬೆಂಗಳೂರು –560025

ದೂರವಾಣಿ:080–41144126

*E –mail:info@civicspace.in web:www.civicspace.in*

## ಪರಿವಿಡಿ


| | |
|---|---|
| 1. ಹಿನ್ನೆಲೆ ಮತ್ತು ಅಸಂಘಟಿತ ಕಾರ್ಮಿಕರ 43 ವರ್ಗಗಳು | 4 |
| 2. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | 6 |
| 3. ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 7 |
| 4. ಜನನಿ ಸುರಾಕ್ಷ ಯೋಜನೆ | 7 |
| 5. ಕೈಮೋಗ್ಗ ನೇಕಾರರಿಗೆ ಸಮಗ್ರವಾದ ಕಲ್ಯಾಣ ಯೋಜನೆಗಳು | 9 |
| 6. ಕರಕುಶಲ ಕಾರ್ಮಿಗಳ ಸಮಗ್ರವಾದ ಕಲ್ಯಾಣ ಯೋಜನೆಗಳು | 11 |
| 7. ಮೀನುಗಾರರ ಕ್ಷೇಮಾಭಿವೃದ್ಧಿ ರಾಷ್ಟ್ರೀಯ ಕಲ್ಯಾಣ ಯೋಜನೆ | 14 |
| 8. ಜನಶ್ರೀ ಬೀಮಾ ಯೋಜನೆ | 15 |
| 9. ಆಮ್ ಆದ್ಮಿ ಬೀಮಾ ಯೋಜನೆ | 16 |
| 10. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ | 22 |
| 11. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯ ಟೀಕೆ ಟಿಪ್ಪಣಿಗಳು | 29 |
| 12. ಸ್ವಾವಲಂಭನ್ ಯೋಜನೆ | 30 |
| 13. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ, | 31 |
| 14. ಪ್ರಧಾನ ಮಂತ್ರಿ ಸುರಾಕ್ಷ ವಿಮಾ ಯೋಜನೆ | 33 |
| 15. ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ | 34 |
| 16. ಆಟಲ್ ಪಿಂಚಣಿ ಯೋಜನೆ | 34 |
| 17. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ | 35 |
| 18. ಕಾರ್ಮಿಕರ ಸೇವೆಯಲ್ಲಿ ಕಲ್ಯಾಣ ಮಂಡಳಿ | 48 |
| 19. ಬೀಡಿ ಕಾರ್ಮಿಕರ ಕಲ್ಯಾಣ ಯೋಜನೆಗಳು | 53 |
| 20. ಸಿನಿಮಾ ಕಾರ್ಮಿಕರ ಕಲ್ಯಾಣ ಯೋಜನೆಗಳು | 57 |
| 21. ಕಾರ್ಮಿಕ ಇಲಾಖೆಗಳ ರಾಜ್ಯ ಮಟ್ಟದ ವಿಳಾಸ | 59 |
| 22. ಮಾಹಿತಿ ಹಕ್ಕು ಕಾಯ್ದೆ, ಅರ್ಜಿ, ಮೇಲ್ಮನವಿ ಅರ್ಜಿ, ಆಯೋಗಕೆ ದೂರು ನೀಡುವ ಅರ್ಜಿ | 60 |
| 23. ರಾಜ್ಯ ಮಾಹಿತಿ ಆಯೋಗದ ವಿಳಾಸ | 63 |
| 24. ಸಕಾಲ ಯೋಜನೆ ಬಗ್ಗೆ | 63 |
| 25. ಲೋಕಾಯುಕ್ತ ಕಚೇರಿ ವಿಳಾಸ | 64 |

# FOREWORD

According to a Survey conducted by the National Sample Survey of India in 2009-10, the total employment in the country was 46.5 crore, comprising around 2.8 crore in the organised and the remaining 43.7 crore workers in the unorganised sector. There are 24.6 crore workers employed in the agriculture sector, about 4.4 crore in construction work and the remaining in manufacture and service. These unorganised workers contribute 50% to our gross domestic product (GDP).

Most of these workers are migrants, illiterate and unorganised. Due to lack of skill and inexperience, these workers face a number of problems. It is in these compelling conditions that these workers become easy victims of exploitation, suffering and inhuman treatment. A study indicates that these workers are not paid minimum wages; even agreed wages are not paid in time. Their working hours are not well regulated. They do not always get overtime wages for excess work. They work under hazardous conditions where safety measures are hardly met. In case of accident, there is no provision for financial and medical aid. In cases like death, no body owns responsibility.

There are no recreational facilities and drinking water, canteen, toilets, etc are not easily available. If the workers are female, their problems are much graver. These workers and their children have no social security benefits like pension, insurance schemes, maternity leave, accident and death claims, etc.

After 60 years of independence the central government enacted a law called 'The Unorganised Workers' Social Security Act, 2008' providing for the social security and welfare of unorganised workers. It is our experience that many laws are not implemented or half-heartedly implemented or violated. This is the reason a majority of people are not able to reap the fruits of laws enacted. Therefore the real test of law is its implementation.

The CIVIC and its executive trustee, Kathyayini Chamaraj, have done a commendable job in bringing out this small, beautiful and valuable book to create awareness among the unorganised workers. In this way they are assisting the unorganised workers in securing the benefits provided under the law. At the same time they are exposing the shortcomings in the existing law. I appreciate this socio-legal audit of the implementation of schemes and welfare legislation by CIVIC. I congratulate Kathyayini Chamaraj for this noble work. I wish her good success in her mission for the welfare of the downtrodden.

**H N Nagamohan Das**
Former Judge, High Court of Karnataka
Senior Advocate, Supreme Court of India

# ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ನಮ್ಮ ದೇಶದಲ್ಲಿ ಕಾರ್ಮಿಕರ ಸಂಖ್ಯೆ 50 ಕೋಟಿ ದೇಶದ ದುಡಿಯುವ ವರ್ಗದಲ್ಲಿ ಶೇ.92 ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದ ವ್ಯಾಪ್ತಿಯಲ್ಲಿದ್ದು ಶಾಸನಬದ್ಧ ಸೌಲಭ್ಯಗಳಿಂದ ವಂಚಿತರಾಗಿರುವ ಸಂಭವ ಹೆಚ್ಚಾಗಿರುತ್ತದೆ. ಇವರ ಜೀವನ ಮಟ್ಟವನ್ನು ಉತ್ತಮಪಡಿಸಿ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ದೇಶದ ಪ್ರಗತಿಪರ ಹಾಗೂ ಕಾರ್ಮಿಕ ಸಂಘ, ಸ್ವಯಂ ಸೇವ ಸಂಸ್ಥೆಗಳ ಒಕ್ಕೂಟಗಳಿಂದ ನೆಡೆದ ಸಮಾಲೋಚನೆ ಸಭೆಗಳ ಒತ್ತಡಕ್ಕೆ ಮಣಿದು ಅಂದಿನ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವರಾದ ಶ್ರೀಮಾನ್ ಅಸ್ಕರ್ ಪರ್ನಾಡಿಸ್‌ರವರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು 2008 ರಲ್ಲಿ ಜಾರಿಗೆ ತಂದಿರುತ್ತದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ)ನಿಯಮಗಳು, 2009 ಅನ್ನು ಜಾರಿಗೆ ತಂದಿರುತ್ತದೆ. ಅಲ್ಲದೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ.

**ಸಂವಿಧಾನ್ಮತಕ ಅಂಶಗಳು:–** ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಯ ಹಕ್ಕನ್ನು ಅತಿ ಮುಖ್ಯವಾಗಿ ನಮ್ಮ ದೇಶದ ಸಂವಿಧಾನದಲ್ಲಿ ಶಾಸಿರುವುದು ಗಮನಾರ್ಹ, ಅನುಚ್ಛೇದ 38 ರ ಪ್ರಕಾರ ಕನರ ಕಲ್ಯಾಣಕ್ಕಾಗಿ ಸಮಾಜಿಕ ವಾತವರಣದ ಭದ್ರತೆಯನ್ನು ಒದಗಿಸುವುದು. ಅನುಚ್ಛೇದ 39ರ ಪ್ರಕಾರ ಹಲವು ರಾಜ್ಯಾಂಗ ನೀತಿ ತತ್ವಗಳು. ಅನುಚ್ಛೇದ 41ರ ಪ್ರಕಾರ ಕೆಲಸದ ಹಕ್ಕನ್ನು, ಶಿಕ್ಷಣ ಹಾಗೂ ಕೆಲ ಸಂದರ್ಭಗಳಲ್ಲಿ ಸಾರ್ವಜನಿಕ ನೆರವನ್ನು ಒದಗಿಸುವುದು. ಅನುಚ್ಛೇದ 42 ರ ಪ್ರಕಾರ ಕೆಲಸದ ಜಾಗಗಳಲ್ಲಿ ಶೋಷಣೆ ರಹಿತವಾದ ವಾತವಾರಣ ಸೃಷ್ಟಿಸುವುದು ಹಾಗೂ ಹೆರಿಗೆಗೆ ಒದಗಿಸುವ ಸೇವೆಗಳು. ಅನುಚ್ಛೇದ 43 ರ ಪ್ರಕಾರ ಜೀವನ ನೆಡೆಸಲು ಆಗುವಷ್ಟು ಕೂಲಿ ನೀಡುವುದು. ಈ ಮೇಲ್ಕಂಡ ಅಂಶಗಳ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಆಳವಡಿಸಿದೆ.

ಈ ಮಂಡಳಿಗೆ ಮಾನ್ಯ ಕಾರ್ಮಿಕ ಸಚಿವರು ಅಧ್ಯಕ್ಷರಾಗಿದ್ದು, ಸಾರ್ಕರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಮಂಡಳಿಯಲ್ಲಿ ಅಸಂಘಟಿತ ವಲಯದ 7 ಜನ ಮಾಲೀಕ ಪ್ರತಿನಿಧಿಗಳು, 7ಜನ ಕಾರ್ಮಿಕ ಪ್ರತಿನಿಧಿಗಳು, 5ಜನ ನಾಗರೀಕ ಸಮಾಜದ ಗಣ್ಯ ವ್ಯಕ್ತಿಗಳು, ವಿಧಾನಸಭೆಯ ಇಬ್ಬರು ಚುನಾಯಿತ ಪ್ರತಿನಿಧಿಗಳು, ಹಾಗೂ 7ಜನ ಸರ್ಕಾರದ ಹಿರಿಯ ಅಧಿಕಾರಿಗಳನ್ನು ಒಳಗೊಂಡಂತೆ ಒಟ್ಟು 28 ಮಂದಿ ಸದಸ್ಯರಿರುತ್ತಾರೆ.
ರಾಜ್ಯ ಸರ್ಕಾರವು ಈ ಕೆಳಕಂಡ 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದ್ದು, ಮಂಡಳಿಯು ಜಾರಿಗೊಳಿಸುತ್ತಿರುವ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರಲಾಗಿದೆ.

| | | |
|---|---|---|
| 1. ದರ್ಜಿಗಳು | 2. ಮಡಿವಾಳರು, ದೋಬಿಗಳು | 3. ಬೀದಿ ಬದಿಯ ಮಾರಟಗಾರರು |
| 4. ಹಮಾಲರುಗಳು | 5. ಹೋಟೆಲ್ ಕಾರ್ಮಿಕರು | 6. ಆಟೋಮೋಬೈಲ್ ವರ್ಕಶಾಪ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು |
| 7. ಗೃಹ ಕಾರ್ಮಿಕರು | 8. ಮೀನುಗಾರರು | 9. ಚಿಂದಿ ಆಯುವವರು |
| 10. ಕುಂಬಾರರು | 11. ಚಮ್ಮಾರರು | 12. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು |
| 13. ಕ್ಷೌರಿಕರು | 14. ಕಸಾಯಿಖಾನೆ ಕಾರ್ಮಿಕರು | 15. ಸಫಾಯಿ ಕರ್ಮಚಾರಿಗಳು |
| 16. ಕಮ್ಮಾರರು | 17. ಚೇನಿವಾರರು/ಅಕ್ಕಸಾಲಿಗ್ಗರು | 18. ಪೋರ್ಟರ್ |
| 19. ಮನೆಗಳಲ್ಲಿ ಬೀಡಿ | 20. ಶಿಲ್ಪಕಾರರು/ಹಸ್ತಕುಶಲ | 21. ಪ್ರವಾಸಿ ಗೈಡ್‌ಗಳು |

| | | |
|---|---|---|
| ಕಟ್ಟುವವರು | ಕಾರ್ಮಿಕರು | |
| 22. ಚಿತ್ರ ಬಿಡಿಸುವವರು | 23. ಮನೆಗಲಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು | 24. ಮಂಡಕ್ಕಿ ಭಟ್ಟಿ ತಯಾರಕರು |
| 25. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು | 26. ನಾರಿನ ಉದ್ಯಮದಲ್ಲಿ ತೊಡಗಿರುವ ಕೂಲಿ ಕಾರ್ಮಿಕರು | 27. ಛಾಯಾವೃತ್ತಿ ಕೆಲಸಗಾರರು |
| 28. ರೇಷ್ಮೆ ಕಾರ್ಮಿಕರು | 29. ಕಲ್ಲು ಒಡೆಯುವ ಕಾರ್ಮಿಕರು | 30. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು |
| 31. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು | 32. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು | 33. ಬೀದಿ ಬದಿಯ ಮಾರಟಗಾರರು |
| 34.ಬಿದಿರಿನ ವಸ್ತುಗಳ ತಯಾರು ಮಾಡುವವರು | 35.ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಕರು | 36.ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಲಲ್ಲಿ ತೊಡಗಿರುವ ಕೊಲಿ ಕಾರ್ಮಿಕರು |
| 37.ಖಾದ್ಯ ತೈಲ / ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು | 38.ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು | 39.ಚಾಲಕರು ನಿರ್ವಾಕರು ಸಹಾಯಕರು ಕ್ಲೀನರ್‌ಗಳು ಗಾಡಿ ಎಳೆಯುವ ರಿಕ್ಷಾ ವಾಲಾಗಳು ಟಾಂಗಾವಾಲಾಗಳು |
| 40.ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು | 41.ಅಡಿಗೆ ಕೆಲಸಗಾರರು/ ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು / ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು | 42.ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು |
| 43.ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ / ವಾಚ್‌ಮ್ಯಾನ್‌ಗಳು | | |

ಇತರೆ ವರ್ಗ (ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಕಲಂ 2 (ಎಂ) ಹಾಗೂ ಕಲಂ 2 (1) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)

**ಈ ಕೆಳಕಂಡ ಯೋಜನೆಗಳು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಯೋಜನೆಗಳಾಗಿವೆ**

1. **ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ:-** ಚಾಲ್ತಿಯಲ್ಲಿದ್ದ ವೃದ್ಧಾಪ್ಯ ವೇತನದ ನಿಯಮಗಳನ್ನು ಬದಲಾಯಿಸಿ 19/11/2007ರಿಂದ ಕೇಂದ್ರ ಸರ್ಕಾರವು ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯನ್ನು ಜಾರಿಗೆ ತಂದಿದೆ. (ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆ)

**ಉದ್ದೇಶ :** ವೃದ್ದರಿಗೆ ಸಹಾಯ ಒದಗಿಸುವುದು. **ಪಿಂಚಣಿ ಮೊತ್ತದ ವಿವರಗಳು :**

| ವಯಸ್ಸು | ಪಿಂಚಣಿಯ ಒಟ್ಟು ಮೊತ್ತ | ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು | |
|---|---|---|---|
| | | ಕೇಂದ್ರ | ರಾಜ್ಯ |
| 60-64 ವರ್ಷ | ರೂ.200/- | ರೂ.200/- | 0 |
| 65-79 ವರ್ಷ | ರೂ.500/- | ರೂ.200/- | ರೂ.300/- |
| 80 ವರ್ಷಕ್ಕೆ ಮೇಲ್ಪಟ್ಟು | ರೂ.750/- | ರೂ.500/- | ರೂ.250/- |

ಈ ಯೋಜನೆಯಡಿ ರಾಜ್ಯ ಸರ್ಕಾರವು ಪರಿಷ್ಕರಿಸಿರುವ ಪಿಂಚಣಿ ಮೊತ್ತಗಳ ವಿತರಣೆಯು ದಿನಾಂಕ: 01/04/2011 ರಿಂದ ಜಾರಿಗೆ ಬಂದಿರುತ್ತದೆ. ಹಾಗೂ ಈ ಯೋಜನೆಯಡಿ ವಯಸ್ಸಿನ ಮಿತಿಯನ್ನು ಸಹಾ ಪರಿಷ್ಕರಿಸಿದ್ದು ಇದೂ ಸಹಾ 01/04/2012 ರಿಂದ ಜಾರಿಗೆ ಬಂದಿರುತ್ತದೆ.

| **ಸಲ್ಲಿಸಬೇಕಾದ ದಾಖಲೆಗಳು** | |
|---|---|
| ವಾಸಸ್ಥಳದ ದೃಢೀಕರಣ ಪತ್ರ (ಚುನಾವಣೆ ಗುರುತಿನ ಚೀಟಿ, ಆಧಾರ್, ರೇಷನ್ ಕಾರ್ಡ್ ಇತ್ಯಾದಿ.) | ವಯಸ್ಸಿನ ವೈದ್ಯಕೀಯ ದೃಢೀಕರಣ ಪತ್ರ |
| ಆದಾಯ ಪ್ರಮಾಣ ಪತ್ರ ಅಥವಾ ಬಿ.ಪಿ.ಎಲ್ ಪಡಿತರ ಚೀಟಿ ನಕಲು ಪ್ರತಿ. | ಬೇರೆ ಯಾವುದೇ ಯೋಜನೆಯಲ್ಲಿ ಪಿಂಚಣಿ ಪಡೆಯುತ್ತಿರಬಾರದು. (ಸರ್ಕಾರಿ/ಖಾಸಗಿ). |
| ಫಲಾನುಭವಿಗಳಿಗೆ ಗಂಡು ಮಕ್ಕಳು ಇದ್ದಾಗ್ಯೂ ಅವರು ಫಲಾನುಭವಿಗಳನ್ನು ಪೋಷಿಸದೆ ಇದ್ದಲ್ಲಿ ಈ ಮಾಸಾಶನವನ್ನು ಪಡೆಯಬಹುದಾಗಿದೆ. | ಅರ್ಜಿದಾರರು ಬ್ಯಾಂಕ್ ಖಾತೆ ಅಥವಾ ಅಂಚೆಖಾತೆ ಸಂಖ್ಯೆ. |
| ನಾಡಕಚೇರಿ ಅಥವಾ ಜನಸ್ನೇಹಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. | ಪಾಸ್ ಅಳತೆಯ 5 ಭಾವಚಿತ್ರಗಳು<br>**ಅರ್ಜಿ ಸಲ್ಲಿಸಿದ ನಂತರ ಸ್ವೀಕೃತಿ ಪಡೆಯುವುದು.** |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:-**

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ, 5ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009. ದೂರವಾಣಿ ಸಂಖ್ಯೆ: 080-22232040/22232012 ಫ್ಯಾಕ್ಸ್ ಸಂಖ್ಯೆ:-22232040

**2.ರಾಷ್ಟ್ರೀಯ ಕುಟುಂಬ ನೆರವು ಯೋಜನೆ**

ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ (*NSAP*) ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಕೇಂದ್ರ ಸಹಾಯಧನ ಲಭ್ಯವಿದ್ದು ಇದರ ಅನ್ವಯ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಮುಖ್ಯಸ್ಥನ ಮರಣವಾದಲ್ಲಿ ಒಂದು ಬಾರಿಯ ಸಹಾಯಧನವನ್ನು ನೀಡಲಾಗುವುದು.

**<u>ನಿಬಂಧನೆಗಳು:</u>**

ಈ ಯೋಜನೆಯನ್ನು ದಿನಾಂಕ: 15ನೇ ಆಗಸ್ಟ್ 1995 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

1. ಕುಟುಂಬ ಮುಖ್ಯಸ್ಥನಾಗಿದ್ದು, ಕುಟುಂಬದ ಪೂರ್ಣ **ನಿರ್ವಹಕನಾಗಿದ್ದು,** ಆತನ ಮರಣವಾದಲ್ಲಿ ಅಂತಹ ಕುಟುಂಬಕ್ಕೆ ಸಹಾಯಧನ ನೀಡಲಾಗುವುದು.
2. ಮರಣದ ಸಂದರ್ಭದಲ್ಲಿ ಕುಟುಂಬದ ಮುಖ್ಯಸ್ಥನ ವಯಸ್ಸು 18 ಕ್ಕಿಂತ ಹೆಚ್ಚಿಗೆ ಮತ್ತು 65 ಕ್ಕಿಂತ ಕಡಿಮೆ ಇರಬೇಕು.
3. ಈ ಯೋಜನೆಯಡಿ ಒಂದು ಬಾರಿ ರೂ.20,000/-ದ ನೆರವು ಲಭ್ಯವಾಗಲಿದೆ.(ಈ ಯೋಜನೆಯಡಿ ಪರಿಹಾರವನ್ನು ಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಭರಿಸಲಾಗುತ್ತದೆ) ಅರ್ಜಿಯನ್ನು ಬಿಪಿಎಲ್ ಕುಟುಂಬದ ಜೀವಂತವಿರುವ ಸದಸ್ಯರ ಮುಖ್ಯಸ್ಥನು ತಮ್ಮ ವ್ಯಾಪ್ತಿಯ ನಾಡಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು.

**ಯೋಜನೆಗೆ ಸಲ್ಲಿಸಬೇಕಾದ ದಾಖಲಾತಿಯ ವಿವರ ಕೆಳಕಂಡಂತಿದೆ.**

1. ವಾಸಸ್ಥಳ ಪ್ರಮಾಣ ಪತ್ರ 2. ಮರಣ ಪ್ರಮಾಣ ಪತ್ರ 3.ಪಡಿತರ ಚೀಟಿ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ,
5ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009
ದೂರವಾಣಿ ಸಂಖ್ಯೆ: 080-22232040/22232012 ಫ್ಯಾಕ್ಸ್ ಸಂಖ್ಯೆ:-22232040
ಇ-ಮೇಲ್ ವಿಳಾಸ: <u>dssp2008@gmail.com</u> Website : <u>www.dssp.kar.nic.in</u>

**3.ಜನನಿ ಸುರಕ್ಷಾ ಯೋಜನೆ:**

ಜನನಿ ಸುರಕ್ಷಾ ಯೋಜನೆ (ಜೆ.ಎಸ್.ವೈ)0ಯು ಹಿಂದಿನ ರಾಷ್ಟ್ರೀ0ಯು ಹೆರಿಗೆ ಭತ್ಯೆ 0ಯೋಜನೆ0ಯು ಮುಂದುವರಿದ 0ಯೋಜನೆ0ಯಾಗಿರುತ್ತದೆ. ಇದು ಬಡತನ ರೇಖೆಗಿಂತ ಕೆಳಗಿರುವ ಅಂದರೆ ಕುಟುಂಬದ ವಾರ್ಷಿಕ ಆದಾ0ಯ ರೂ 17,000 /-ಕ್ಕೂ ಕಡಿಮೆ ಇದ್ದಲ್ಲಿ (ಬಡತನ ರೇಖೆಗಿಂತ ಮೇಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮಹಿಳೆಯರು ಸಹ ಒಳಗೊಂಡಂತೆ) ಅಂತಹ ಕುಟುಂಬದ ಗರ್ಭಿಣಿ ಮಹಿಳೆ0ಯರಿಗೆ ಹೆರಿಗೆ ಸಂದರ್ಭದಲ್ಲಿ ಆರ್ಥಿಕ ಸಹಾ0ಯದ ಉದ್ದೇಶ ಹೊಂದಿರುತ್ತದೆ. ಜನನಿ ಸುರಕ್ಷಾ ಯೋಜನೆ0ಯನ್ನು ಸೆಪ್ಟಂಬರ್ 2005 ರಿಂದ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗಿತ್ತಿದೆ.

**ಈ ಕಾ0ರ್ಯಕ್ರಮದ ಉದ್ದೇಶಗಳು:**

ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು. ಎಲ್ಲಾ ಗರ್ಭಿಣಿ0ಯರಿಗೆ ಗುಣಾತ್ಮಕ ವೈದ್ಯಕೀ0ಯ ಸೇವೆ0ಯನ್ನು ನೀಡುವುದು.ಕ್ಲಿಷ್ಟಕರ ಹೆರಿಗೆ0ಯ ಸಂದರ್ಭದಲ್ಲಿ ತುರ್ತು ಸಿಜೇರಿ0ಯನ್ ಶಸ್ತ್ರ ಚಿಕಿತ್ಸೆಗೆ ಅವಕಾಶ, ವೈದ್ಯ ತಪಾಸಣೆಗೆ ಗರ್ಭಿಣಿಗೆ ಉತ್ತೇಜನ, ಸಾಂಸ್ಥಿಕ ಹೆರಿಗೆಗೆ ಪ್ರೋತ್ಸಾಹ, ಸಣ್ಣ ಕುಟುಂಬಕ್ಕೆ ಪ್ರೋತ್ಸಾಹ ನೀಡುವುದು.

**ಈ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆಗಳು**

| | |
|---|---|
| ಮನೆ/ಉಪಕೇಂದ್ರ/ಸರ್ಕಾರಿ ಆಸ್ಪತ್ರೆ/ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಸಾಮಾನ್ಯ ವಾರ್ಡಿಗೆ ಧಾಖಲಾಗಿರುವ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯಾಗಿರಬೇಕು. | ಪ್ರಸ್ತುತ ಹೆರಿಗೆ ಮೊದಲನೇ ಮತ್ತು ಎರಡನೇ ಜೀವಂತ ಹೆರಿಗೆಯಾಗಿರಬೇಕು. |
| ಮಹಿಳೆಯು 19 ವರ್ಷಕ್ಕಿಂತ ಮೇಲ್ಪಟ್ಟಿರಬೇಕು | ಕನಿಷ್ಠ 3 ಬಾರಿ ವೈದ್ಯರಿಂದ ಗರ್ಭಿಣಿ ತಪಾಸಣೆ ಮಾಡಿಸಿಕೊಂಡಿರಬೇಕು |
| 100 ಕಬ್ಬಿಣದಂಶದ ಮಾತ್ರೆ ಮತ್ತು ಟಿ.ಟಿ. ಚುಚ್ಚುಮದ್ದನ್ನು ಪಡೆದಿರಬೇಕು. | |

**ಗರ್ಭಿಣಿಯು ಬಡಕುಟುಂಬದವಳಾಗಿದ್ದು, ಆದರೆ ಬಿ.ಪಿ.ಎಲ್. ಕಾರ್ಡನ್ನು ಹೊಂದಿಲ್ಲದಿರುವ ವಿಶೇಷ ಸಂದರ್ಭದಲ್ಲಿ**

- ಬಡತನ ರೇಖೆಗಿಂತ ಮೇಲ್ಪಟ್ಟ ಆದರೆ ಪ. ಜಾತಿ/ಪ. ಪಂಗಡಕ್ಕೆ ಸೇರಿದ ಮಹಿಳೆಯರು ತಮ್ಮ ಜಾತಿ ದೃಢೀಕರಣ ಪತ್ರವನ್ನು ಸಲ್ಲಿಸಿದಲ್ಲಿ ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.
- ಪಟ್ಟಣ ಅಥವಾ ನಗರ ಪ್ರದೇಶದಲ್ಲಿ ಗರ್ಭಿಣಿಯು ಬಡ ಕುಟುಂಬದವರೆಂದು ಆಶ್ರಯ ಫಲಾನುಭವಿಗಳ ಪಟ್ಟಿಯನ್ನಾಧರಿಸಿ ಪುರಸಭೆಯ ಮುಖ್ಯಾಧಿಕಾರಿ ಅಥವ ನಗರ ಸಭೆ/ಪಾಲಿಕೆ ಆಯುಕ್ತರು ನೀಡಿದ ಧೃಢೀಕರಣ ಪತ್ರ ಸಲ್ಲಿಸಿದಲ್ಲಿ ಈ ಯೋಜನೆಗಳಡಿಯಲ್ಲಿ ಸೌಲಭ್ಯಗಳನ್ನು ಪಡೆಯಬಹುದಾಗಿದೆ.
- ಅಧಿಸೂಚಿತ ಕೊಳಚೆ ಪ್ರದೇಶದಲ್ಲಿ ವಾಸವಿರುವ ಕುಟುಂಬದ ಗರ್ಭಿಣಿಯೆಂದು ಕೊಳಚೆ ನಿರ್ಮೂಲನಾ ಮಂಡಳಿಯಿಂದ ನೀಡಲಾಗಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಈ ಯೋಜನೆಗಳಡಿಯಲ್ಲಿ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

**ಈ 0ೋಜನೆ0ುಡಿ0ುಲ್ಲಿ ಫಲಾನುಭವಿಗಳಿಗೆ ದೊರೆ0ುುವ ಸೌಲಭ್ಯಗಳು:**

| | | |
|---|---|---|
| ಮನೆಯಲ್ಲಾದ ಹೆರಿಗೆಗೆ | ಗ್ರಾಮೀಣ ಮತ್ತು ನಗರ ಪ್ರದೇಶಗಲ್ಲಿ | ರೂ. 500 |
| ಆಸ್ಪತ್ರೆ ಹೆರಿಗೆ | ಗ್ರಾಮೀಣ ಪ್ರದೇಶದ ಮಹಿಳೆಗೆ | ರೂ 700 |
| | ನಗರ ಪ್ರದೇಶದ ಮಹಿಳೆಗೆ | ರೂ. 600 |
| | ಸಿಸೇರಿ0ುನ್ ಹೆರಿಗೆ ಆದ ಮಹಿಳೆಗೆ | ರೂ. 1,500 |

ಹೆಚ್ಚಿನ ಮಾಹಿತಿಗಾಗಿ
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್ ರಾವ್ ವೃತ್ತ, ಬೆಂಗಳೂರು–09,
ದೂರವಾಣಿ:080–22874039, 22354085

**4.ಕೈಮೊಗ್ಗ ನೇಕಾರರಿಗೆ ಸಮಗ್ರವಾದ ಕಲ್ಯಾಣ ಯೋಜನೆ (ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)**

ಈ ಕೈಮೊಗ್ಗ ನೇಕಾರರಿಗೆ ಸಮಗ್ರವಾದ ಕಲ್ಯಾಣಯೋಜನೆಗಳನ್ನು ಒದಗಿಸಲು ಎರಡು ತರಹದ ಯೋಜನೆಗಳನ್ನು ನೀಡಲಾಗಿದೆ ಅವುಗಳೆಂದರೆ

1) ಆರೋಗ್ಯ ವಿಮಾ ಯೋಜನೆ (ಹಿಸ್)

2) ಮಹಾತ್ಮ ಗಾಂಧಿ ಬುಂಕಾರ ಬಿಮಾ ಯೋಜನೆ

1. **ಆರೋಗ್ಯ ವಿಮಾ ಯೋಜನೆ (ಹಿಸ್) :–**ಕೇಂದ್ರ ಸರ್ಕಾರವು 1992–93 ರಿಂದ ಆರೋಗ್ಯ ವಿಮಾ ಯೋಜನೆ ಇದೆ. ಈ ವಿಮೆಯನ್ನು ಐಸಿಐಸಿಐ ಜನರಲ್ ವಿಮಾಕಂಪನಿ ಮೂಲಕ ನೀಡುತ್ತಿದೆ.

**ಉದ್ದೇಶ:–** ರಾಷ್ಟ್ರದಲ್ಲಿ ಉತ್ತಮವಾದ ಆರೋಗ್ಯ ಸೇವಾ ಸೌಲಭ್ಯವನ್ನು ಪಡೆಯಲು ಅನೂಕೂಲವಾಗಿದೆ. ಈ ಯೋಜನೆಯು ನೇಕಾರರಿಗೆ ಮತ್ತು ಹೆಂಡತಿ ಹಾಗೂ ಇಬ್ಬರು ಮಕ್ಕಳಿಗೆ ಸೌಲಭ್ಯ ಸಿಗುತ್ತದೆ.

**ಯೋಜನೆಯ ವಿವರ:–** ಭಾರತ ಸರ್ಕಾರವು ರೂ.642.47 ಪೈಸ ಪ್ರತಿ ವರ್ಷಕ್ಕೆ ಹಾಗೂ ನೇಕಾರ/ ರಾಜ್ಯ ಸರ್ಕಾರವು ರೂ. 139.13 ಪೈಸೆ ಪ್ರತಿ ವರ್ಷಕ್ಕೆ ಕಟ್ಟುವುದು ಒಂದು ವೇಳೆ ರಾಜ್ಯ ಸರ್ಕಾರವೇ ಎಲ್ಲಾ ಭರಿಸಿದರೆ ನೇಕಾರ ರೂ. 50/– ನ್ನು ಕಟ್ಟಲೇಬೇಕು. ಒಟ್ಟು ರೂ. 781.60 ಪೈಸೆ ಪ್ರತಿ ವರ್ಷಕ್ಕೆ.

**ಈ ಯೋಜನೆಗೆ ಅರ್ಹರು:–**

1. ನೇಕಾರರು, ದಾರ ಸುತ್ತುವವರು, ಬಟ್ಟಗೆ ಬಣ್ಣ ಹಾಕುವವರು, ಬಟ್ಟೆ ಮುದ್ರಿಸುವವರು ಮತ್ತು ಬಟ್ಟೆ ತಯಾರಿಸಲ್ಪಡುವ ಎಲ್ಲಾ ವಿಧದ ಕಾರ್ಮಿಕರು ಈ ಯೋಜನೆಗೆ ಅರ್ಹರು.
2. ಶೇಕಡ 50 ರಷ್ಟು ಆದಾಯ ಅವರ ಜೀವನ ನಿರ್ವಹಣೆಗೆ ಈ ಕೆಲಸದಿಂದ ಆಗುತ್ತಿರಬೇಕು.
3. ಈ ಯೋಜನೆ ಪುರುಷ ಮತ್ತು ಮಹಿಳೆಗೆ ಅನ್ವಹಿಸುತ್ತದೆ ಮತ್ತು ಅವರ ಕುಟುಂಬ ಸದಸ್ಯರ ವಯಸ್ಸು ಹುಟ್ಟಿನಿಂದ 80ವರ್ಷದವರೆಗೆ ಪಡೆಯಬಹುದು.
4. ಕೈಮೊಗ್ಗ ಅಭಿವೃದ್ಧಿ ನಿಗಮದ ಮೂಲಕ/ಸಹಕಾರ ಸಂಘಗಳ ಮೂಲಕ ನೋಂದಣಿಯಾಗಬೇಕು ಅಥವಾ ಈ ಯೋಜನೆಗೆ ನೋಂದಣಿ ಪಡೆಯದೆ ಇದ್ದರೆ ಸಹ ಯೋಜನೆ ಪಡೆಯಬಹುದು.
5. ಈ ಯೋಜನೆಗೆ ಅರ್ಹರನ್ನು ಗುರ್ತಿಸಿ ಯೋಜನೆಯನ್ನು ದೊರಕಿಸಿ ಕೊಡುವುದು ರಾಜ್ಯ ನಿರ್ದೇಶಕರು ಜವಾಬ್ದಾರಿಯಾಗಿದೆ.
6. ಐಸಿಐಸಿಐ ವಿಮಾಗೆ ಒಳಪಡುವ ಅಸ್ಪತ್ರೆಗಳಿಗೆ ವೈದ್ಯಕೀಯ ವೆಚ್ಚವನ್ನು ಭರಿಸುತ್ತದೆ.
7. ಆಸ್ಪತ್ರೆಗೆ ದಾಖಲಾದರೆ ಈ ಯೋಜನೆಯ ಅಡಿಯಲ್ಲಿ ಕಾರ್ಮಿಕರು ಚಿಕಿತ್ಸೆಗೆ ಹಣನೀಡದೆ ಚಿಕಿತ್ಸೆ ಪಡೆಯಬಹುದು ಆಡಳಿತಾಧಿಕಾರಿಯ ಒಪ್ಪಿಗೆ ಮೇರೆಗೆ ಹಾಗೂ ಇತರೆ ವೈದ್ಯಕೀಯ ಬಿಲ್‌ಗಳನ್ನು ನೀಡಿದರೆ 15ದಿನದಲ್ಲಿ ಹಣ ಮರುಪಾವತಿ ನೀಡುತ್ತಾರೆ.
8. ಅವಧಿ ಒಂದು ವರ್ಷ ನಂತರ ನವೀಕರಣ ಮಾಡಿಕೊಳ್ಳಬೇಕು.

9. ಒಂದು ಕುಟುಂಬಕ್ಕೆ ವಾರ್ಷಿಕ 15ಸಾವಿರ ರೂ ಚಿಕಿತ್ಸೆಯನ್ನು ಪಡೆಯಬಹುದು.

**ಈ ಯೋಜನೆಯ ಸೌಲಭ್ಯಗಳು**

| ಕ್ರ.ಸಂ | ಕಾಯಿಲೆ | ಹಣ |
|---|---|---|
| 1 | ವಾರ್ಷಿಕ ನಿಗದಿತ ಕುಟುಂಬ(1+3) | 15000/– |
| 2 | ಎಲ್ಲಾ ತರಹದ ಹಳೆಯ ಮತ್ತು ಹೊಸ ಕಾಯಿಲೆಗಳಿಗೆ | 15000/– |
| 3 | ಹೆರಿಗೆ ಸೌಲಭ್ಯ ಮೋದಲ 2 ಹೆರಿಗೆಗೆ | 2500/– |
| 4 | ದಂತ ಚಿಕಿತ್ಸೆ | 250/– |
| 5 | ಕಣ್ಣಿನ ಚಿಕಿತ್ಸೆ | 75/– |
| 6 | ಕನ್ನಡಕದ ವೆಚ್ಚ | 250/– |
| 7 | ಡೋಮಿಸಿಲಾರಿ | 4000/– |
| 8 | ಆಯುರ್ವೇದ/ಯುನಾನಿ/ಹೋಮಿಯೋಪತಿ | 4000/– |
| 9 | ಮಗುವಿನ ವೆಚ್ಚ | 500/– |
| 10 | ಹೊರರೋಗಿ ಚಿಕಿತ್ಸೆ | 7500/– |
| 11 | ಪ್ರತಿ ಕಾಯಿಲೆಗೆ | 7500/– |

2. **ಮಹಾತ್ಮ ಗಾಂಧಿ ಬುಂಕಾರ ಬೀಮಾ ಯೋಜನೆ:–** ಭಾರತ ಸರ್ಕಾರವು ಜನಶ್ರೀ ಬೀಮಾ ಯೋಜನೆಯೊಂದಿಗೆ ಬುಂಕಾರ ಬೀಮಾ ಯೋಜನೆಯನ್ನು ಎಲ್ಐಸಿ ಯೊಂದಿಗೆ ಅನುಷ್ಠಾನಗೊಳಿಸುತ್ತಿದೆ.

**ಉದ್ದೇಶ:–** ನೇಕಾರರ ಸ್ವಭಾವಿಕ/ ಅಪಘಾತ ಸಾವು/ಅರ್ಧ ಭಾಗಶಹ ಅಂಗವಿಕಲತೆ ಉಂಟಾದವರಿಗೆ ಅನ್ವಹಿಸುತ್ತದೆ.

**ಅರ್ಹತೆ:–**

1. ಶೇಕಡ 50 ರಷ್ಟು ಆದಾಯ ಅವರ ಜೀವನ  ನಿರ್ವಹಣೆಗೆ ಈ ಕೆಲಸದಿಂದ ಆಗುತ್ತಿರಬೇಕು.
2. ವಯಸ್ಸು 18 ರಿಂದ 59 ರ ಒಳಗಿನ ಪುರುಷ ಮತ್ತು ಮಹಿಳೆಗೆ ಅನ್ವಹಿಸುತ್ತದೆ.
3. ಈ ಯೋಜನೆಗೆ ಅರ್ಹರನ್ನು ಗುರ್ತಿಸಿ ಯೋಜನೆಯನ್ನು ದೊರಕಿಸಿ ಕೊಡುವುದು ರಾಜ್ಯ ನಿರ್ದೇಶಕರು ಜವಾಬ್ದಾರಿಯಾಗಿದೆ.

ಆಡಳಿತ ನಿರ್ವಹಣೆ:– ಕೈಮೋಗ್ಗ ನೀಕಾರರ ಉಸ್ತುವಾರಿ ಪ್ರಾಧಿಕಾರ ವಿಮಾ ಸೌಲಭ್ಯಗಳನ್ನು ಎಲ್ ಐ ಸಿ ಮುಖಾಂತರ ಅನುಷ್ಠಾನ ಮಾಡುತ್ತಿದೆ.

**ಸೌಲಭ್ಯಗಳು:–**

1. ಸ್ವಾಭವಿಕ ಮರಣ – ರೂ.60000/–
2. ಅಪಘಾತ ಮರಣ – 150000/–
3. ಪೂರ್ತಿ ಅಂಗವಿಕಲತೆ – 150000/–
4. ಭಾಗಶಃ ಅಂಗವಿಕಲತೆ – 75000/–

**ಕಂತು ಪಾವತಿ:–** ಒಟ್ಟು ವಾರ್ಷಿಕ ಹಣ ಪಾವತಿ – ರೂ.470/–, ಭಾರತ ಸರ್ಕಾರದ ವಂತಿಗೆ – ರೂ. 290/–, ನೇಕಾರರ ವಂತಿಗೆ – ರೂ. 80/–, ಎಲ್ಐಸಿಯ ವಂತಿಕೆ – ರೂ. 100/–.

**ಆವಧಿ:–**ಒಂದು ವರ್ಷ ಈ ಯೋಜನೆಯ ಕಲಾವಧಿ ಹಾಗೂ ಪ್ರತಿ ವರ್ಷ ಹಣ ಕಟ್ಟಿ ಈ ಯೋಜನೆಯನ್ನು ನವೀಕರಣ ಮಾಡಿ ಕೊಳ್ಳಬೇಕು.

**ಇತರೆ ಸೌಲಭ್ಯಗಳು:–**

1) **ಶೈಕ್ಷಣಿಕ ಭತ್ಯೆ:–** ಶಿಕ್ಷ ಸಹಯೋಹ ಯೋಜನೆಯ ಅಡಿಯಲ್ಲಿ ನೇಕಾರರ ಎರಡು ಮಕ್ಕಳಿಗೆ ಶೈಕ್ಷಣಿಕ ಭತ್ಯಯನ್ನು ನೀಡಲಾಗುತ್ತದೆ. ಇಲ್ಲಿ ಪ್ರತಿ ವರ್ಷ ಮೇ ಮತ್ತು ಜೂನ್ ನಲ್ಲಿ 9ನೇ ತರಗತಿ, 10ನೇ ತರಗತಿ, 11ನೇ ತರಗತಿ ಮತ್ತು 12ನೇ ತರಗತಿಯ ಮಕ್ಕಳಿಗೆ ರೂ.300/– ನ್ನು ಮಕ್ಕಳ ಖಾತೆಗೆ ಎಲ್ಐಸಿಯು ಚೆಕ್ ಮುಖಾಂತರ ವಿತರಿಸುತ್ತದೆ.

**5. ಕರಕುಶಲ ಕಾರ್ಮಿಗಳ ಸಮಗ್ರವಾದ ಕಲ್ಯಾಣ ಯೋಜನೆಗಳು**(ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

ಕರಕುಶಲ ಕಾರ್ಮಿಕರನ್ನು ಅವರ ಕುಟುಂಬದವರನ್ನು ಆರ್ಥಿಕವಾಗಿ, ಆರೋಗ್ಯವಂತರಾಗಿ ಮತ್ತು ಶೈಕ್ಷಣಿಕವಾಗಿ ಸಧೃಢರಾಗಿಸಲು ಹಲವಾರು ಕಲ್ಯಾಣ ಯೋಜನೆಗಳನ್ನು ಕರಕುಶಲ ಉದಮೀ ಇಲಖೆಯು ಜಾರಿಗೆ ತಂದಿವೆ ಅವೆಂದರೆ

1. ರಾಜೀವ್ ಗಾಂಧಿ ಶಿಲ್ಪಿ ಸ್ವಾಸ್ಥ್ಯ ಬೀಮಾ ಯೋಜನೆ
2. ಆಮ್ ಆದ್ಮಿ ಬೀಮಾ ಯೋಜನೆ
3. ಕರಕುಶಲ ಕಾರ್ಮಿಕನಿಗೆ ದಾರಿದ್ರ್ಯ ಪರಿಸ್ಥಿತಿಗೆ ಬೆಂಬಲ ಯೋಜನೆ
4. ಸಾಲ ಖಾತ್ರಿ ಯೋಜನೆ
5. ಸಬ್ಸಿಡಿ ಬಡ್ಡಿದರಲ್ಲಿ ಸಾಲ ಯೋಜನೆ
6. ದತ್ತಾಂಶ ಸಂಗ್ರಹಿಸಲು ಗುರುತಿನ ಚೀಟಿ ವಿತರಣೆ

1. **ರಾಜೀವ್ ಗಾಂಧಿ ಶಿಲ್ಪಿ ಸ್ವಾಸ್ಥ್ಯ ಬೀಮಾ ಯೋಜನೆ**

**ಉದ್ದೇಶ:–** ಉತ್ತಮ ಆರೋಗ್ಯ ಸೇವೆ ಒದಗಿಸುವುದು.

**ಅರ್ಹತೆ:–** ಎಲ್ಲಾ ಕರಕುಶಲ ಕಾರ್ಮಿಕರಿಗೆ ಅರ್ಹತೆ ಇದ್ದು ಆರ್ ಎಸ್ ಬಿ ವೈ ಮತ್ತು ಕಾರ್ಮಿಕ ಉದ್ಯೋಗ ನಿಬಂಧನೆಗೆ ಒಳಪಟ್ಟಿರುತ್ತದೆ.

**ಹಣ ಕಾಸಿನ ಸಹಾಯಧನದ ವಿವರ:–** ಭಾರತ ಸರ್ಕಾರವು ಯೋಜನೆಯ ಶೇ 75 ಭಾಗವನ್ನು ವಂತಿಕೆಯನ್ನು ನೀಡುತ್ತದೆ ಹಾಗೂ ರಾಜ್ಯ ಸರ್ಕಾರವು ಶೇ 25 ಭಾಗವನ್ನು ವಂತಿಕೆಯಾಗಿ ನೀಡುತ್ತದೆ. ಕರಕುಶಲ ಕಾರ್ಮಿಕನ್ನು ನೋಂದಣಿ ಶುಲ್ಕ ರೂ.30ನ್ನು ನಿಡಬೇಕು.

**ಕಾಲಾವಧಿ:–** ಒಂದು ವರ್ಷವಾಗಿದ್ದು ಒಂದು ವರ್ಷದ ನಂತರ ರೂ.30 ಶುಲ್ಕ ನೀಡಿ ನವೀಕರಣ ಮಾಡಿಕೊಳ್ಳಬೇಕು ಈ ಯೋಜನೆಯ ಕುಟುಂಬದ 5ಜನರಿಗೆ ಅನ್ವಹಿಸುತ್ತದೆ. ವಾರ್ಷಿಕ ರೂ.30000/– ದವರಗೆ ಒಳರೋಗಿಯಾಗಿ ಚಿಕತ್ಸೆಯನ್ನು ಪಡೆಯಬಹುದು. ಹಾಗೂ ಹೋರರೋಗಿಯಾಗಿ ರೂ.7500/–ನ್ನು ಚಿಕತ್ಸೆಯನ್ನು ಪಡೆಯಬಹುದು.

2. **ಕರಕುಶಲ ಕಾರ್ಮಿಕರಿಗಾಗಿ ಆಮ್ ಆದ್ಮಿ ಬೀಮಾ ಯೋಜನೆ** (ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

ಭಾರತ ಸರ್ಕಾರವು ಆಮ್ ಆದ್ಮಿ ಬೀಮಾ ಯೋಜನೆಯನ್ನು ಎಲ್ಐಸಿ ಯೊಂದಿಗೆ ಅನುಷ್ಠಾನಗೊಳಿಸುತ್ತಿದೆ.

**ಉದ್ದೇಶ:–** ನೇಕಾರರ ಸ್ವಭಾವಿಕ/ ಅಪಘಾತ ಸಾವು/ಅರ್ಧ ಭಾಗಶಹ ಅಂಗವಿಕಲತೆ ಉಂಟಾದವರಿಗೆ ಅನ್ವಹಿಸುತ್ತದೆ.

**ಅರ್ಹತೆ:–**

1. ಶೇಕಡ 50 ರಷ್ಟು ಆದಾಯ ಅವರ ಜೀವನ ನಿರ್ವಹಣೆಗೆ ಈ ಕೆಲಸದಿಂದ ಆಗುತ್ತಿರಬೇಕು.
2. ವಯಸ್ಸು 18 ರಿಂದ 59 ರ ಒಳಗಿನ ಪುರುಷ ಮತ್ತು ಮಹಿಳೆಗೆ ಅನ್ವಹಿಸುತ್ತದೆ.
3. ಈ ಯೋಜನೆಗೆ ಅರ್ಹರನ್ನು ಗುರ್ತಿಸಿ ಯೋಜನೆಯನ್ನು ದೊರಕಿಸಿ ಕೊಡುವುದು ರಾಜ್ಯ ನಿರ್ದೇಶಕರು ಜವಾಬ್ದಾರಿಯಾಗಿದೆ.

**ಆಡಳಿತ ನಿರ್ವಹಣೆ:–** ಕೈಮೋಗ್ಗ ನೇಕಾರರ ಉಸ್ತುವಾರಿ ಪ್ರಾಧಿಕಾರ ವಿಮಾ ಸೌಲಭ್ಯಗಳನ್ನು ಎಲ್ ಐ ಸಿ ಮುಖಾಂತರ ಅನುಷ್ಠಾನ ಮಾಡುತ್ತಿದೆ.

**ಕಂತು ಪಾವತಿ:–** ಒಟ್ಟು ವಾರ್ಷಿಕ ಹಣ ಪಾವತಿ – ರೂ.470/–, ಭಾರತ ಸರ್ಕಾರದ ವಂತಿಗೆ – ರೂ. 290/–, ನೇಕಾರರ ವಂತಿಗೆ – ರೂ. 80/–, ಎಲ್ಐಸಿಯ ವಂತಿಕೆ – ರೂ. 100/–.

**ಆವಧಿ:–**ಒಂದು ವರ್ಷ ಈ ಯೋಜನೆಯ ಕಲಾವಧಿ ಹಾಗೂ ಪ್ರತಿ ವರ್ಷ ಹಣ ಕಟ್ಟಿ ಈ ಯೋಜನೆಯನ್ನು ನವೀಕರಣ ಮಾಡಿ ಕೊಳ್ಳಬೇಕು.

| ವಿಮೆಯ ಲಾಭಗಳು | | | |
|---|---|---|---|
| ಕ್ರ.ಸಂ | ಸೌಲಭ್ಯ | ಒಟ್ಟು ಹಣ | ಪಡೆಯುವವರು |
| 1 | ನೈಸರ್ಗಿಕ ಸಾವು | ರೂ.30,000/– | **ನಾಮಿನಿಗೆ ಕೊಡಲಾಗುವುದು.** |
| 2 | ಆಕಸ್ಮಿಕ ಸಾವು | ರೂ.75,000/– | **ನಾಮಿನಿಗೆ ಕೊಡಲಾಗುವುದು.** |
| 3 | ಅಪಘಾತದಿಂದ ಪೂರ್ಣ ಅಂಗವಿಕಲತೆ | ರೂ.75,000/– | ಫಲಾನುಭವಿಗೆ |
| 4 | ಅಪಘಾತದಿಂದ ಭಾಗಶಃ ಅಂಗವಿಕಲತೆ | ರೂ.37,500/– | ಫಲಾನುಭವಿಗೆ |
| 5 | 9ನೇ ತರಗತಿಯಿಂದ 12ನೇ ತರಗತಿಯವರೆಗೆ | ಪ್ರತಿ ವರ್ಷರೂ. 1200/– | ಫಲಾನುಭವಿಗಳ ಮಕ್ಕಳಿಗೆ |

**3.ಕರಕುಶಲ ಕಾರ್ಮಿಕನಿಗೆ ದಾರಿದ್ರ್ಯ ಪರಿಸ್ಥಿತಿಗೆ ಬೆಂಬಲ ಯೋಜನೆ** (ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

**ಉದ್ದೇಶ:–** ಕರಕುಶಲ ಕಾರ್ಮಿಕನ ದಾರಿದ್ರ್ಯ ಪರಿಸ್ಥಿತಿಗೆ ಮತ್ತು ವಯೋ ವೃದ್ಧ ಕರಕುಶಲ ನೇಕಾರರಿಗೆ ಆರ್ಥಿಕ ಸಹಾಯ ಮಾಡುವುದು.

**ಅರ್ಹತೆ:–**

- ಹಿಂದೆ ಕರಕುಶಲ ಕಾರ್ಮಿಕನು ಶಿಲ್ಪಗುರು ಬಿರುದು, ರಾಷ್ಟ್ರೀಯ ಬಿರುದು, ರಾಜ್ಯ ಬಿರುದು ಮತ್ತು ಶ್ರೇಣಿಯುತ ಪ್ರಮಾಣ ಪತ್ರಗಳನ್ನು ಪಡೆದಿದ್ದವರಿಗೆ ಈ ಯೋಜನೆ ಪಡೆಯಲು ಅರ್ಹರು.
- ರೂ. 30ಸಾವಿರ ವಾರ್ಷಿಕ ಆದಾಯ ಮೀರಾಬಾರದು.
- ಇದೇ ತರಹದ ಹಣಕಾಸಿನ ನೆರವನ್ನು ಬೇರೆಲ್ಲೂ ಪಡೆದಿರಬಾರದು.
- 60 ವರ್ಷಗಳ ಒಳಗೆ ಅರ್ಜಿ ಸಲ್ಲಿಸಬೇಕು ಮತ್ತು ಅಂಗವಿಕರಿಗೆ ವಯಸ್ಸಿನಲ್ಲಿ ವಿನಾಯಿತಿ ಇದೆ.

**ಸೌಲಭ್ಯ:–** ಹಣ ವಿತರಣೆಯನ್ನು ಸಹಾಯಕ ನಿರ್ದೇಶಕರಿಮದ ಮಾಸಿಕ 2ಸಾವಿರ ರೂ ನೀಡಲಾಗುತ್ತದೆ.

4. **ಸಾಲ ಖಾತ್ರಿ ಯೋಜನೆ** (ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

ಕರಕುಶಲ ಸ್ವ ಸಹಾಯ ಸಂಘಗಳ ಮೂಲಕ ಈ ಯೋಜನೆ ಸೌಲಭ್ಯವನ್ನು ಪಡೆಯಬಹುದಾಗಿದೆ.

**ಹಣಕಾಸು ನೆರವು:–** ಸಿಜಿಟಿಎಸ್ಎಂಇ ಆರ್ಥಿಕ ಸಂಸ್ಥೆಯು ಹಣಕಾಸು ನೆರವನ್ನು ನೀಡುತ್ತದೆ. ಮೋದಲಭಾರಿಗೆ ರೂ.2ಲಕ್ಷ ಸಾಲ ನೆರವನ್ನು ವಾರ್ಷಿಕ ಶೇ1.5 ರಷ್ಟು ಬಡ್ಡಿದರದಲ್ಲಿ ನೀಡುತ್ತದೆ. ಇದರಲ್ಲಿ ಶೇ 0.75 ರಷ್ಟು ವಾರ್ಷಿಕ ಸೇವ ತೆರಿಗೆಯನ್ನು ನೀಡಬೇಕು ಹಾಗೂ ರೂ 25 ಲಕ್ಷದವರೆಗೆ ಸಾಲ ಸೌಲಭ್ಯ ಪಡೆಯಬಹುದು.

3ವರ್ಷಗಳಲ್ಲಿ ತೆಗೆದು ಕೊಂಡ ಸಾಲವನ್ನು ಹಿಂದಿರುಗಿಸಬೇಕು. ಹಾಗೂ ಸೇವಾ ಶುಲ್ಕ ಒಟ್ಟು ಹಣದ ಶೇ 5 ರಷ್ಟು ನೀಡಬೇಕಾಗುತ್ತದೆ.

5. **ಸಬ್ಸಿಡಿ ಬಡ್ಡಿದರಲ್ಲಿ ಸಾಲ ಯೋಜನೆ** (ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

ಈ ಯೋಜನೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸಾಲ ದೊರೆಯುತ್ತದೆ 50 ಸಾವಿರ ಸಾಲ ಸಿಗುತ್ತದೆ ಇದರಲ್ಲಿ ಶೇ 3ರಷ್ಟು ಹಣವನ್ನು ಸಬ್ಸಿಡಿಯಾಗಿರುತ್ತದೆ.

**ಅರ್ಹತೆ:–** ಕೈಮೊಗ್ಗದಲ್ಲಿ ಕರಕುಶಲ ಕಾರ್ಮಿಕರು ನೋಂದವಣಿಯಾಗಿರಬೇಕು.

1. **ದತ್ತಾಂಶ ಸಂಗ್ರಹಿಸಲು ಗುರುತಿನ ಚೀಟಿ ವಿತರಣೆ**(ಕರ್ನಾಟಕದಲ್ಲಿ ಈ ಯೋಜನೆ ಅನುಷ್ಠಾನ ವಾಗುತ್ತಿಲ್ಲ)

ಕರಕುಶಲ ಕಾರ್ಮಿಕರು ನೋಂದಣಿಯಾಗಿರುವುದನ್ನು ಆಧಾರ್ ಸಂಖ್ಯೆಗೆ ಜೋಡಣೆ ಮಾಡಿ ಉಸ್ತುವಾರಿ ಮಾಡುವುದು.

**ಹಣಕಾಸಿನ ನೆರವು:–** ಪ್ರತಿ ಕಾರ್ಡಗೆ ಕಚೇರಿಯಿಂದ ರೂ 50/– ನೀಡುವುದು ಹೆಸರನ್ನು ದತ್ತಾಂಶದಲ್ಲಿ ನೋಂದಾಯಿಸುವುದು.

**6.ಕರಕುಶಲ ವ್ಯಕ್ತಿಗಳಿಗೆ ಪಿಂಚಣಿ ಸೌಲಭ್ಯ:–** (ಕರ್ನಾಟಕದಲ್ಲಿ ಅನುಷ್ಠಾನ ವಾಗುತ್ತಿಲ್ಲ)

- ಹಿಂದೆ ಕರಕುಶಲ ಕಾರ್ಮಿಕನು ಶಿಲ್ಪಗುರು ಬಿರುದು, ರಾಷ್ಟ್ರೀಯ ಬಿರುದು, ರಾಜ್ಯ ಬಿರುದು ಮತ್ತು ಶ್ರೇಣಿಯುತ ಪ್ರಮಾಣ ಪತ್ರಗಳನ್ನು ಪಡೆದಿದ್ದವರಿಗೆ ಈ ಯೋಜನೆ ಪಡೆಯಲು ಅರ್ಹರು.
- ರೂ. 30ಸಾವಿರ ವಾರ್ಷಿಕ ಆದಾಯ ಮೀರಾಬಾರದು.
- ಇದೇ ತರಹದ ಹಣಕಾಸಿನ ನೆರವನ್ನು ಬೇರೆಲ್ಲೂ ಪಡೆದಿರಬಾರದು.
- 60 ವರ್ಷಗಳ ಒಳಗೆ ಅರ್ಜಿ ಸಲ್ಲಿಸಬೇಕು ಮತ್ತು ಅಂಗವಿಕರಿಗೆ ವಯಸ್ಸಿನಲ್ಲಿ ವಿನಾಯಿತಿ ಇದೆ.

**ಸೌಲಭ್ಯ:–** ಹಣ ವಿತರಣೆಯನ್ನು ಸಹಾಯಕ ನಿರ್ದೇಶಕರಿಂದ ಮಾಸಿಕ 2ಸಾವಿರ ರೂ ನೀಡಲಾಗುತ್ತದೆ.

**7.ಮೀನುಗಾರರ ಕ್ಷೇಮಾಭಿವೃದ್ಧಿಗೆ ರಾಷ್ಟೀಯ ಕಲ್ಯಾಣ ಯೋಜನೆ:–** (ಕರ್ನಾಟಕದಲ್ಲಿ ಅನುಷ್ಠಾನ ವಾಗುತ್ತಿಲ್ಲ)ಕೃಷಿ ಸಚಿವಾಲಯವು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರರಿಗೆ ಸಹಾಯಧನ ಮತ್ತು ಪರಿಹಾರಧನವನ್ನು ಹೆಚ್ಚಿಸಲಾಗಿದೆ.

**ಮುಖ್ಯ ಉದ್ದೇಶ:–**

- ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಮೀನುಗಾರರ ಹಳ್ಳಿಗಳಿಗೆ ಶೌಚಾಲಯ ಒದಗಿಸುವುದು.
- ಮೀನುಗಾರರು ಮತ್ತು ಅವರ ಕುಟುಂಬಗಳ ಜೀವನ ಮಟ್ಟವನ್ನು ಹೊಂದುವುದು.
- ಕ್ರೀಯಾಶೀಲವಾದ ಮೀನುಗಾರರಿಗೆ ಮತ್ತು ಅವಲಂಬಿತರಿಗೆ  ಸಾಮಾಜಿಕ ಮತ್ತು ಆರ್ಥಿಕ ಸುಭದ್ರತೆಯನ್ನು ಒದಗಿಸುವುದು.

**ಯೋಜನೆಗಳು:–**

- ಕ್ರೀಯಾಶೀಲವಾದ ಮೀನುಗಾರರಿಗೆ ಗುಂಪು ಅಪಘಾತ ವಿಮೆ.
- ಮಾದರಿ ಮೀನುಗಾರರ ಹಳ್ಳಿಗಳ ಅಭಿವೃದ್ಧಿ
- ಉಳಿತಾಯ ಮತ್ತು ಪರಿಹಾರ
- ತರಬೇತಿ ಮತ್ತು ಪ್ರಾತ್ಯೇಕ್ಷತೆ ಚಟುವಟಿಕೆ.

**ಸೌಲಭ್ಯಗಳು:–**

| ಕ್ರ.ಸಂ | ಯೋಜನೆ | ಹಣ |
|---|---|---|
| 1 | ಮನೆಗಳ ನಿರ್ಮಾಣ | ರೂ.75000/– ಪ್ರತಿ ಮನೆಗೆ |
| 2 | ಬೋರ್ ವೇಲ್‌ಗಳ ನಿರ್ಮಾಣಕ್ಕೆ ಹಣ | ಎಲ್ಲಾ ರಾಜ್ಯಗಳಿಗೆ ರೂ.40000/– ಹಾಗೂ ಈಶಾನ್ಯ ರಾಜ್ಯಗಳಿಗೆ ರೂ 75000/– |
| 3 | ಸಮುದಾಯ ಭವನ ನಿರ್ಮಾಣಕ್ಕೆ | ರೂ.200000/– ಪ್ರತಿ ಘಟಕ |
| 4 | ಉಳಿತಾಯ ಮತ್ತು ಪರಿಹಾರ ಹಣ | ರೂ.2700/–, (ಪ್ರತಿ 3ತಿಂಗಳಿಗೆ) |
| 5 | ಗುಂಪು ಅಪಘಾತ ಪರಿಹಾರ ವಿಮೆ | 50% ಅಂಗವಿಕಲತೆಗೆ ರೂ.100000/–, ಮರಣ ಪರಿಹಾರ ಹಾಗೂ 100% ಅಂಗವಿಕಲತೆಗೆ ರೂ.200000/– |
| 6 | ತರಬೇತಿ ಮತ್ತು ಪ್ರಾತ್ಯೇಕ್ಷತೆ ಚಟುವಟಿಕೆ. | ಪ್ರತಿ ದಿನಕ್ಕೆ ಕನಿಷ್ಠ ರೂ.125/–, ಗರಿಷ್ಠ ರೂ 1875/– 15ದಿನಗಳಿಗೆ, ಗೌರವ ಧನ 15000/– ಪ್ರತಿ ಬರಹಗಾರರಿಗೆ, ಕೈಪಿಡಿ ತಯಾರಿಸಲು ರೂ.5000/–, ಸಭೆಗಳಿಗೆ ರೂ.50000/–, ತರಬೇತಿ ಕೇಂದ್ರ ಕಟ್ಟಡಕ್ಕೆ ರೂ.30ಲಕ್ಷ, |
| 7 | ರಾಷ್ಟ್ರೀಯ ಮೀನುಗಾರರ ಸಹಕಾರ ಒಕ್ಕೋಟಕ್ಕೆ ವಂತಿಗೆ | ರೂ.50 ಲಕ್ಷ |

## 8.ಜನಶ್ರಿ ಬೀಮಾ ಯೋಜನೆ

**ಉದ್ದೇಶ:–**ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸೇವೆಯಲ್ಲಿರುವಾಗ ಮರಣ ಹೊಂದಿದ್ದಲ್ಲಿ / ಅಪಘಾತ ಸಂಭವಿಸಿದ್ದಲ್ಲಿ ಪರಿಹಾರ ನೀಡಲು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜನಶ್ರಿ ಬೀಮಾ ಯೋಜನೆಯಡಿ **"ಅಂಗನವಾಡಿ ಕಾರ್ಯಕರ್ತೆಯರ ಬೀಮಾ ಯೋಜನೆ "** ಯನ್ನು ದಿನಾಂಕ 01–04–2014 ರಿಂದ ಜಾರಿಗೆ ತರಲಾಗಿದೆ.

**ಅರ್ಹತೆ:–**18 ರಿಂದ 60 ವರ್ಷದೊಳಗಿನ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ವಿಮಾ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ.

ವಿವರ:–ಈ ಯೋಜನೆಗೆ ವಾರ್ಷಿಕ ಪ್ರೀಮಿಯಂ ಮೊತ್ತ ರೂ.280/– ಗಳನ್ನು ನಿಗದಿಪಡಿಸಿದ್ದು ಭಾರತೀಯ ಜೀವ ವಿಮಾ ನಿಗಮ ರೂ.100/– ಮತ್ತು ಕೇಂದ್ರ ಸರ್ಕಾರ ರೂ.100/– ಗಳನ್ನು ಭರಿಸುತ್ತದೆ. ಉಳಿದ 80/– ರೂ.ಗಳನ್ನು ಸೌಲಭ್ಯ ಪಡೆಯುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಭರಿಸುತ್ತಾರೆ. ರಾಜ್ಯದಲ್ಲಿ 36349 ಅಂಗನವಾಡಿ ಕಾರ್ಯಕರ್ತೆಯರು 33027 ಅಂಗನವಾಡಿ ಸಹಾಯಕಿಯರು ಈ ಯೋಜನೆಯಡಿ ಒಳಪಟ್ಟಿರುತ್ತಾರೆ. ಐಸಿಡಿಎಸ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಸಿ.ಡಿ.ಪಿ.ಒ ನೋಡಲ್ ಏಜೆನ್ಸಿಯಾಗಿರುತ್ತಾರೆ.

ವಿಮಾ ರಕ್ಷಣೆ:–ಈ ಯೋಜನೆಯ ರಕ್ಷಣೆ ಅಡಿಯಲ್ಲಿರುವಾಗ ಮರಣ / ಅಪಘಾತ ಸಂಭವಿಸಿದ್ದಲ್ಲಿ ವಾರಸುದಾರರಿಗೆ ನೀಡುವ ವಿಮಾ ರಕ್ಷಣೆಯ ವಿವರ ಈ ಕೆಳಗಿನಂತಿರುತ್ತದೆ:–

| ವಿವರ | ಮೊತ್ತ |
|---|---|
| ಸಹಜ ಮರಣ | ರೂ.20,000/– |
| ಅಪಘಾತದಿಂದ ಮರಣ | ರೂ.50,000/– |
| ಅಪಘಾತದಿಂದ ಪೂರ್ತಿ ಮತ್ತು ಶಾಶ್ವತ ಅಂಗವೈಕಲ್ಯ | ರೂ.50,000/– |
| ಅಪಘಾತದಿಂದ 2 ಕಣ್ಣು, 2 ಕೈ, 2 ಕಾಲು ಶಾಶ್ವತವಾಗಿ ಕಳೆದುಕೊಂಡರೆ | ರೂ.50,000/– |
| ಅಪಘಾತದಿಂದ 1 ಕಣ್ಣು, 1 ಕೈ, 1 ಕಾಲು ಶಾಶ್ವತವಾಗಿ ಕಳೆದುಕೊಂಡರೆ | ರೂ.25,000/– |
| 9 ರಿಂದ 12ನೇ ತರಗತಿಯಲ್ಲಿ ಓದುತ್ತಿರುವ ಪಾಲಿಸಿದಾರರ ಮಕ್ಕಳಿಗೆ (2 ಮಕ್ಕಳಿಗೆ ಸೀಮಿತವಾಗಿ) ಪ್ರತೀ ತ್ರೈಮಾಸಿಕ ರೂ.300/– ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. | |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:–**

ಪ್ರಧಾನ ಕಛೇರಿ : ಜಂಟಿ ನಿರ್ದೇಶಕರು (ಐಸಿಡಿಎಸ್) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು,
*Email ID- dirwcd@kar.nic.in, web site – dwcd.kar.nic.in, contact number : 080-22353777, 22353766, 22386153, 22353780, 22353833*

## 9.ಆಮ್ ಆದ್ಮಿ ಬೀಮಾ ಯೋಜನೆ

ಸಂಕಷ್ಟದ ಪರಿಸ್ಥಿತಿಯಲ್ಲಿ ಆರ್ಥಿಕ ಭದ್ರತೆ ಒದಗಿಸುವ ದೃಷ್ಟಿಯಿಂದ ಗುರುತಿಸಲ್ಪಟ್ಟ 72 ವಿವಿಧ ಕಸುಬುದಾರರ ಕುಟುಂಬಗಳಿಗೆ ವಿಮಾ ಸೌಲಭ್ಯವನ್ನು ಕಲ್ಪಿಸಿ ಕೊಡುವ ಉದ್ದೇಶದಿಂದ “ಆಮ್ ಆದ್ಮಿ ಬೀಮಾ ಯೋಜನೆ” ಯನ್ನು ರೂಪಿಸಲಾಗಿದೆ.

ಆಮ್ ಆದ್ಮಿ ಬೀಮಾ ಯೋಜನೆ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರ ಮತ್ತು ಭಾರತೀಯ ಜೀವ ವಿಮಾ ನಿಗಮದ ಸಹಭಾಗಿತ್ವದೊಂದಿಗೆ ಗುರುತಿಸಲ್ಪಟ್ಟ 72 ವಿವಿಧ ಕಸುಬುದಾರರ ಕುಟುಂಬಗಳ ಆಶಾಕಿರಣವಾಗಿ ಹೊರ ಹೊಮ್ಮಿದೆ.

**ನೋಡಲ್ ಏಜೆನ್ಸಿ ಯಾರು?**

ನೋಡಲ್ ಏಜೆನ್ಸಿ ಎಂದರೆ ರಾಜ್ಯ ಸರ್ಕಾರ ಆಡಳಿತ ಜವಾಬ್ದಾರಿ ತೆಗೆದುಕೊಂಡು ಪ್ರತಿ ಸದಸ್ಯನ ಪರ ಮತ್ತು ಅವರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವ ಸಂಸ್ಥೆ– ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ.

**ಈ ಯೋಜನೆಯ ಫಲಾನುಭವಿಗಳು ಯಾರು?**

ಕೆಳಗೆ ನಮೂದಿಸಿರುವ 72 ವಿವಿಧ ಕಸುಬುದಾರರ ಕುಟುಂಬಗಳಿಂದ ಫಲಾನುಭವಿಗಳನ್ನು ಗುರುತಿಸಲಾಗುವುದು. ಈ ಎಲ್ಲಾ ಫಲಾನುಭವಿಗಳಿಗೆ ಒಂದು ಪ್ರತ್ಯೇಕ ಗುರುತಿನ ಚೀಟಿಯನ್ನು ಜೀವ ವಿಮಾ ನಿಗಮದ ಸಹಭಾಗಿತ್ವದೊಂದಿಗೆ ಸರ್ಕಾರದ ಮುಖಾಂತರ ವಿತರಿಸಲಾಗುವುದು.

| | | |
|---|---|---|
| 1. ಬೀಡಿ ಕಾರ್ಮಿಕರು | 2. ಇಟ್ಟಿಗೆ ಗೂಡು ಕಾರ್ಮಿಕರು | 3. ಬಡಗಿಗಳು |
| 4. ಚಮ್ಮಾರರು | 5. ಮೀನುಗಾರರು | 6. ಹಮಾಲರುಗಳು |
| 7. ಕುಶಲ ಕರ್ಮಿಗಳು | 8. ಕೈ ಮಗ್ಗ ನೇಕಾರರು | 9. ಕೈ ಮಗ್ಗ ಮತ್ತು ಖಾದಿ ಕೆಲಸಗಾರರು |
| 10. ದರ್ಜಿಗಳು | 11. ಚರ್ಮ ಕೈಗಾರಿಕಾ ಕಾರ್ಮಿಕರು | 12. ಎಸ್‌ಇಡಬ್ಲ್ಯೂಎ ಸಂಸ್ಥೆಗೆ ಸೇರಿದ ಹಪ್ಪಳ ತಯಾರಿಕಾ ಕಾರ್ಮಿಕರು |
| 13. ವಿಕಲ ಚೇತನ ಸ್ವ ಉದ್ಯೋಗಿಗಳು | 14. ಪ್ರಾಥಮಿಕ ಹಾಲು ಉತ್ಪಾದಕರು | 15. ರಿಕ್ಷಾ ಎಳೆಯುವವರು / ಆಟೋ ಚಾಲಕರು |
| 16. ಕಸಗುಡಿಸುವವರು | 17. ಉಪ್ಪು ತಯಾರಕರು | 18. ಬೀಡಿ ಎಲೆಗಳ ಸಂಗ್ರಹಕಾರರು |
| 19. ಸಾರಾಯಿ ತಯಾರಕರು | 20. ಕೈ ಮಗ್ಗ ಕಾರ್ಮಿಕರು | 21. ಗುಡ್ಡಗಾಡು ಪ್ರದೇಶದ ಮಹಿಳೆಯರು |
| 22. ಆಹಾರ ತಿನಿಸುಗಳಾದ ಬೆಲ್ಲ / ಸಕ್ಕರೆ | 23. ಜವಳಿ ಕೆಲಸಗಾರರು | 24. ಮರದ ಸಾಮಾಗ್ರಿಗಳ ತಯಾರಕರು |
| 25. ಕಾಗದದಿಂದ ತಯಾರಿಸುವ ವಸ್ತುಗಳು | 26. ಚರ್ಮ ಉತ್ಪನ್ನಗಳು | 27. ಮುದ್ರಣ |
| 28. ರಬ್ಬರ್ ಮತ್ತು ಕಲ್ಲಿದ್ದಲಿನ ಉತ್ಪನ್ನಗಳು | 29. ರಾಸಾಯನಿಕ ಉತ್ಪನ್ನಗಳಾದ ಮೊಂಬತ್ತಿ ಉತ್ಪಾದಕರು | 30. ಖನಿಜ ಉತ್ಪನ್ನಗಳಾದ ಮಣ್ಣಿನ ಆಟಿಕೆಗಳ ತಯಾರಕರು |
| 31. ಕೃಷಿಕರು | 32. ಸರಕು ಸಾಗಾಣಿಕೆ ಚಾಲಕ ಸಂಘದವರು | 33. ಸಾಗಾಣಿಕಾ ಕೆಲಸಗಾರರು |
| 34. ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ | 35. ಕಟ್ಟಡ ಕಾರ್ಮಿಕರು | 36. ಪಟಾಕಿ ತಯಾರಿಕಾ ಕಾರ್ಮಿಕರು |
| 37. ಕೊಬ್ಬರಿ ಉತ್ಪನ್ನ ತಯಾರಕರು | 38. ಅಂಗನವಾಡಿ ಶಿಕ್ಷಕರು | 39. ಕೋತ್ವಾಲರು |
| 40. ತೋಟದ ಕಾರ್ಮಿಕರು | 41. ಕುರಿ ಕಾಯುವವರು | 42. ಸ್ವಸಹಾಯ ಗುಂಪಿನೊಂದಿಗೆ ಗುರುತಿಸಿಕೊಂಡ ಮಹಿಳೆಯರು |
| 43. ಅನಿವಾಸಿ ಭಾರತೀಯ | 44. ಗ್ರಾಮೀಣ ಭೂರಹಿತ | 45. ಕುಂಬಾರರು |

| | | |
|---|---|---|
| ಕಾರ್ಮಿಕರು | ಕುಟುಂಬಗಳು | |
| 46. ಕ್ಷೌರಿಕರು | 47. ಕಮ್ಮಾರರು | 48. ಚಿನಿವಾರರು ಅಕ್ಕಸಾಲಿಗರು |
| 49. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು | 50. ಖಾದ್ಯ ತೈಲ / ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು | 51. ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು |
| 52. ಕಲ್ಲು ಒಡೆಯುವ ಕಾರ್ಮಿಕರು | 53. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು | 54. ಬೀದಿ ಬದಿಯ ಮಾರಾಟಗಾರರು |
| 55. ಚಿಂದಿ ಆಯುವವರು | 56. ಸಫಾಯಿ ಕರ್ಮಚಾರಿಗಳು | 57. ಮಡಿವಾಳರು |
| 58. ಛಾಯಾವೃತ್ತಿ ಕೆಲಸಗಾರರು | 59. ಪ್ರವಾಸಿ ಗೈಡ್‌ಗಳು | 60. ಮಂಡಕ್ಕಿ ತಯಾರಕರು ಕಸಾಯಿಖಾನೆ ಕಾರ್ಮಿಕರು |
| 61. ಖಾಸಗಿ ಹೋಟೆಲ್ ಕಾರ್ಮಿಕರು | 62. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು | 63. ಮನೆ ಕೆಲಸದವರು |
| 64. ಅಡಿಗೆ ಕೆಲಸಗಾರರು/ ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು / ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು | 65. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು | 66. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ ವಾಚ್‌ಮ್ಯಾನ್‌ಗಳು |
| 67. ಆಟೋ ಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವವರು | 68. ನಾರಿನ ಉದ್ಯಮದಲ್ಲಿ ತೊಡಗಿರುವ ಕೂಲಿ ಕಾರ್ಮಿಕರು | 69. ರೇಷ್ಮೆ ಕಾರ್ಮಿಕರು |
| 70. ನಗರ ಪ್ರದೇಶದ ಬಡತನ ರೇಖೆಗಿಂತ ಕೆಳಗಡೆ ಇರುವ ಕುಟುಂಬ | 71. ಅರಣ್ಯ ಪ್ರದೇಶದ ಕೆಲಸಗಾರರು | 72. ಸಾರಾಯಿ ತಯಾರಕರು |

**ಅರ್ಹತೆ:-** ವ್ಯಕ್ತಿಯ ವಯೋಮಿತಿ 18 ರಿಂದ 59 ವರ್ಷಗಳವರೆಗೆ ಇರತಕ್ಕದ್ದು. ವ್ಯಕ್ತಿಯು ಗುರುತಿಸಲ್ಪಟ್ಟ 72 ವಿವಿಧ ಕಸುಬುದಾರರ ಕುಟುಂಬದ ಮುಖ್ಯಸ್ಥನಾಗಿರಬೇಕು ಅಥವಾ ಕುಟುಂಬದ ಮುಖ್ಯ ಸಂಪಾದನೆ ಮಾಡುತ್ತಿರುವವನಾಗಿರಬೇಕು.

**ವಯಸ್ಸಿನ ದಾಖಲೆ:-** ಪಡಿತರ ಚೀಟಿ ಪ್ರತಿ, ಜನನ ಪ್ರಮಾಣ ಪ್ರತಿ, ಶಾಲಾ ದಾಖಲೆಯ ಪ್ರತಿ, ಚುನಾವಣಾ ಪಟ್ಟಿಯ ಪ್ರತಿ ಮತ್ತು ಗುರುತಿನ ಚೀಟಿ ಪ್ರತಿ ಅಥವಾ ಯಾವುದೇ ದಾಖಲೆಗಳಲ್ಲಿ ಅನುಮಾನವಿದ್ದ ಪಕ್ಷದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆದ ಪ್ರಮಾಣ ಪತ್ರವನ್ನು ಮಾನ್ಯ ಮಾಡಲಾಗುತ್ತದೆ.

**ವಿಮಾ ಕಂತು :-** ವಾರ್ಷಿಕ ವಿಮಾ ಕಂತು ರೂ. 200/- ಪ್ರತಿ ಕುಟುಂಬದ ಮುಖ್ಯಸ್ಥರಿಗೆ. ಇದರಲ್ಲಿ ರೂ. 100-00 ಗಳನ್ನು ರಾಜ್ಯ ಸರ್ಕಾರ ಮತ್ತು ರೂ. 100-00 ಗಳನ್ನು ಕೇಂದ್ರ ಸರ್ಕಾರವು ಭರಿಸಲಾಗುತ್ತದೆ. ವಿಮಾ ಕಂತನ್ನು ವರ್ಷಕ್ಕೊಮ್ಮೆ ಪಾವತಿಸಬೇಕು. ಇದರಲ್ಲಿ ಯಾವುದೇ ರೀತಿಯ ಕಂತಿನ ರಿಯಾಯಿತಿ ಇರುವುದಿಲ್ಲ. 3 ವರ್ಷಕ್ಕೊಮ್ಮೆ ಕ್ಲೈಮ್‌ಗಳ ಆಧಾರದ ಮೇಲೆ ಎಲ್.ಐ.ಸಿ ಯು ತನ್ನ ಪ್ರೀಮಿಯಂ ದರವನ್ನು ನಿಗದಿ ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

| ವಿಮೆಯ ಲಾಭಗಳು | | | |
|---|---|---|---|
| ಕ್ರ.ಸಂ | ಸೌಲಭ್ಯ | ಒಟ್ಟು ಹಣ | ಪಡೆಯುವವರು |
| 1 | ನೈಸರ್ಗಿಕ ಸಾವು | ರೂ.30,000/- | **ನಾಮಿನಿಗೆ ಕೊಡಲಾಗುವುದು.** |
| 2 | ಆಕಸ್ಮಿಕ ಸಾವು | ರೂ.75,000/- | **ನಾಮಿನಿಗೆ ಕೊಡಲಾಗುವುದು.** |
| 3 | ಅಪಘಾತದಿಂದ ಪೂರ್ಣ ಅಂಗವಿಕಲತೆ | ರೂ.75,000/- | ಫಲಾನುಭವಿಗೆ |
| 4 | ಅಪಘಾತದಿಂದ ಭಾಗಶಃ ಅಂಗವಿಕಲತೆ | ರೂ.37,500/- | ಫಲಾನುಭವಿಗೆ |
| 5 | 9ನೇ ತರಗತಿಯಿಂದ 12ನೇ ತರಗತಿಯವರೆಗೆ | ಪ್ರತಿ ವರ್ಷರೂ. 1200/- | ಫಲಾನುಭವಿಗಳ ಮಕ್ಕಳಿಗೆ |

**ವಿಮೆಯ ಲಾಭಗಳನ್ನು ಪಡೆಯುವ ವಿಧಾನ:-** ಇದು ಅತ್ಯಂತ ಸರಳವಾಗಿದ್ದು, ಮರಣ ಹೊಂದಿದವರ ನಾಮಿನಿಯು/ಸಂಘ ಸಂಸ್ಥೆಯವರು / ಎನ್.ಜಿ.ಓ ಗಳು ಆಮ್ ಆದ್ಮಿ ಬೀಮಾ ಯೋಜನೆಯ ಕ್ಲೇಮ್ ಅರ್ಜಿಯನ್ನು ದಾಖಲಾತಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಹತ್ತಿರದ ವಿಮಾ ಪ್ರತಿನಿಧಿಯ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಮರಣ ಹೊಂದಿದ / ಅಪಘಾತದಿಂದ ಅಂಗವಿಕಲತೆ ಹೊಂದಿದ ದಿನಾಂಕದಿಂದ 6 ತಿಂಗಳ ಒಳಗಾಗಿ ಸಲ್ಲಿಸಬೇಕು. ಸ್ವೀಕೃತವಾಗಿರುವ ಕ್ಲೇಮ್ ಅರ್ಜಿಗಳನ್ನು ವಿಮಾ ಪ್ರತಿನಿಧಿಗಳು ಪರಿಶೀಲಿಸಿ, ಪರಿಪೂರ್ಣ ಅರ್ಜಿ ಹಾಗೂ ದಾಖಲೆಗಳನ್ನು ಎಲ್.ಐ.ಸಿ ಯ ಬೆಂಗಳೂರು ವಿಭಾಗಕ್ಕೆ ಕ್ಲೇಮ್‌ಗಾಗಿ ಕಳುಹಿಸುತ್ತಾರೆ. ಎಲ್.ಐ.ಸಿ ಯು ಕ್ಲೈಮ್ ಮೊತ್ತವನ್ನು ಚೆಕ್ ಮುಖಾಂತರ ನಾಮಿನಿಯ/ಫಲಾನುಭವಿ ಖಾತೆಗೆ ಕಳುಹಿಸಲಾಗುವುದು.

**ವಿಮಾದಾರರು ಸಹಜ ಮರಣ ಹೊಂದಿದ ಪಕ್ಷದಲ್ಲಿ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕು :-**

- ಆಮ್ ಆದ್ಮಿ ಬೀಮಾ ಯೋಜನೆಯ ಗುರುತಿನ ಚೀಟಿಯ ಪ್ರತಿ.
- ವಯಸ್ಸಿನ ದಾಖಲೆ ಪತ್ರದ ಪ್ರತಿ.
- ಕ್ಲೇಮ್ ಅರ್ಜಿಯನ್ನು ಅನುಬಂಧ – 2 ರಲ್ಲಿ ಸಲ್ಲಿಸುವುದು.
- ಮರಣ ಪ್ರಮಾಣ ಪತ್ರದ ಮೂಲ ಪ್ರತಿ ಅಥವಾ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರುವ ಜೆರಾಕ್ಸ್ ಪ್ರತಿ.
- ಎನ್‌ಇಎಫ್‌ಟಿ(NFET) ಫಾರಂನಲ್ಲಿ ನಾಮಿನಿದಾರರ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಿದ್ದಲ್ಲಿ, ಕ್ಲೇಮ್ ಮೊತ್ತವನ್ನು ನಾಮಿನಿದಾರರಿಗೆ ನೇರವಾಗಿ ವರ್ಗಾಹಿಸಬಹುದಾಗಿರುತ್ತದೆ.

**ವಿಮಾದಾರರು ಅಪಘಾತದಿಂದ ಮರಣ ಹೊಂದಿದ ಪಕ್ಷದಲ್ಲಿ ಮೇಲ್ಕಂಡ ದಾಖಲೆಗಳೊಂದಿಗೆ ಕೆಳಕಂಡ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಬೇಕು:-**

| | |
|---|---|
| ಪ್ರಾಥಮಿಕ ಮಾಹಿತಿ ವರದಿ (FIR) | ಮರಣೋತ್ತರ ಪರೀಕ್ಷೆಯ ವರದಿ (PMR) |
| ಪೊಲೀಸ್ ವಿಚಾರಣೆಯ ವರದಿ (PIR) | ಪೊಲೀಸ್ ಅಂತಿಮ ವರದಿ (Police Conclusion) |

ವಿಮಾದಾರರು ಅಪಘಾತದಿಂದ ಅಂಗವಿಕಲತೆ ಹೊಂದಿದ ಪಕ್ಷದಲ್ಲಿ ಮೇಲ್ಕಂಡ ದಾಖಲೆಗಳೊಂದಿಗೆ ಕೆಳಕಂಡ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಬೇಕು :- ಸರ್ಕಾರಿ ಜಿಲ್ಲಾಮಟ್ಟದ ವೈದ್ಯರು / ನುರಿತ ಸರ್ಕಾರಿ ಮೂಳೆ ತಜ್ಞರಿಂದ ಶಾಶ್ವತ ಮತ್ತು ಸಂಪೂರ್ಣ ಅಂಗವಿಕಲತೆ ಪ್ರಮಾಣ ಪತ್ರ ಪಡೆದು, ಅಪಘಾತ ನಡೆದ 6 ತಿಂಗಳೊಳಗೆ ಎಲ್.ಐ.ಸಿ ಗೆ ನೋಡಲ್ ಏಜೆನ್ಸಿ ಮುಖಾಂತರ ಕಳುಹಿಸಬೇಕು.

**9ನೇ ತರಗತಿಯಿಂದ 12ನೇ ತರಗತಿಯವರೆಗೆ ಓದುತ್ತಿದ್ದರೆ ವಿಮಾದಾರರ ಮಕ್ಕಳಿಗೆ ವಾರ್ಷಿಕ ರೂ. 1200/- ಗಳ ವಿದ್ಯಾರ್ಥಿ ವೇತನವನ್ನು ಪಡೆಯಲು ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕು :-**

- ಆಮ್ ಆದ್ಮಿ ಬೀಮಾ ಯೋಜನೆಯ ಗುರುತಿನ ಚೀಟಿಯ ಪ್ರತಿ.
- ವಿದ್ಯಾರ್ಥಿ ವೇತನದ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.
- ಎನ್ಇಎಫ್ಟಿ(NEFT) ಫಾರಂನಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಿದ್ದಲ್ಲಿ, ವಿದ್ಯಾರ್ಥಿ ವೇತನದ ಮೊತ್ತವನ್ನು ಫಲಾನುಭವಿಗಳಿಗೆ ನೇರವಾಗಿ ವರ್ಗಾಹಿಸಬಹುದಾಗಿರುತ್ತದೆ.
- ನೋಡಲ್ ಏಜೆನ್ಸಿ ಅರ್ಹ ವಿದ್ಯಾರ್ಥಿಗಳನ್ನು ಫಲಾನುಭವಿಗಳ ಮಕ್ಕಳ ಪಟ್ಟಿಯಿಂದ ಗುರುತಿಸಿ, ಅಂತಹ ವಿದ್ಯಾರ್ಥಿ / ಸದಸ್ಯರಿಂದ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ಪಡೆದು, ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ, ಎಲ್.ಐ.ಸಿ ಯವರಿಗೆ ಅರ್ಜಿಯೊಂದಿಗೆ ಸಾಫ್ಟ್ ಕಾಪಿ ಹಾಗೂ ಹಾರ್ಡ್ ಕಾಪಿಯನ್ನು ಕಳುಹಿಸಿಕೊಡುತ್ತಾರೆ.
- ವಿದ್ಯಾರ್ಥಿಗಳ ಮಾಹಿತಿಯನ್ನೊಳಗೊಂಡ ಸಾಫ್ಟ್ ಕಾಪಿ ಹಾಗೂ ಹಾರ್ಡ್ ಕಾಪಿಯನ್ನು ಕಳುಹಿಸಿದ 20 ಕೆಲಸ ನಿರ್ವಹಿಸುವ ದಿನಗಳಲ್ಲಿ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುವುದು.
- ವಿದ್ಯಾರ್ಥಿ ವೇತನವನ್ನು ನೀಡಲಾಗಿರುವ ಪಟ್ಟಿಯೊಂದಿಗೆ ಉಪಯೋಗಿತ ಪ್ರಮಾಣ ಪತ್ರವನ್ನು ಎಲ್.ಐ.ಸಿ ಯವರು ನಿರ್ದೇಶನಾಲಯಕ್ಕೆ ಸಲ್ಲಿಸುತ್ತಾರೆ. ಸದರಿ ಉಪಯೋಗಿತಾ ಪ್ರಮಾಣ ಪತ್ರವನ್ನು ನಿರ್ದೇಶನಾಲಯದ ವತಿಯಿಂದ ನಿಗದಿತ ನಮೂನೆಯಲ್ಲಿ ದೃಢೀಕರಿಸಲಾಗುವುದು.
- ಈ ಯೋಜನೆಯ ಅನುಷ್ಠಾನವನ್ನು ಸಂಪೂರ್ಣವಾಗಿ ಗಣಕೀಕರಿಸಲಾಗಿದ್ದು, ಇದರ ಎಲ್ಲಾ ಮಾಹಿತಿಯನ್ನು www.dssp.kar.nic.in/AABY ನಲ್ಲಿ ನೋಡಬಹುದಾಗಿದೆ.

**ಯೋಜನೆಯ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಹಾಗೂ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಲು ನಿಮ್ಮ ವಿಮಾ ಪ್ರತಿನಿಧಿ ಹಾಗೂ ವಿಮಾ ಘಟಕದ ಕಾರ್ಯಾಲಯಗಳನ್ನು ಸಂಪರ್ಕಿಸಿ.**

| ಕ್ರ.ಸಂ | ಜಿಲ್ಲೆ | ಸೇರ್ಪಡಿಸಿರುವ ಎಲ್.ಐ.ಸಿ ಘಟಕ ಮತ್ತು ವಿಳಾಸ | ಪ್ರತಿನಿಧಿಸಿರುವ ಎಲ್.ಐ.ಸಿ ಅಧಿಕಾರಿಯ ಹೆಸರು | ಕಛೇರಿ ದೂರವಾಣಿ / ಮೊಬೈಲ್ ಸಂಖ್ಯೆ |
|---|---|---|---|---|
| 1.<br>2<br>3<br>4<br>5<br>6 | ತುಮಕೂರು<br>ರಾಮನಗರ<br>ಕೋಲಾರ<br>ಚಿಕ್ಕಬಳ್ಳಾಪುರ<br>ಬೆಂಗಳೂರು<br>ಗ್ರಾಮಾಂತರ<br>ಬೆಂಗಳೂರು ನಗರ | ** ಬೆಂಗಳೂರು ಘಟಕ **<br>ವಿಭಾಗೀಯ ವ್ಯವಸ್ಥಾಪಕರು,<br>ಎಲ್.ಐ.ಸಿ ಆಫ್ ಇಂಡಿಯಾ,<br>ಪಿ &ಜಿ.ಎಸ್ ಯುನಿಟ್<br>"ಜೀವನ್ ಪ್ರಕಾಶ್"<br>ಜೆ.ಸಿ.ರಸ್ತೆ. ಬೆಂಗಳೂರು–560002 | ಶ್ರೀ ಬಿ.ಎಸ್.ನರಸಿಂಹ<br>ಶ್ರೀ ಎಸ್.ಗುರುರಾಜ ರಾವ್ | 080–22248948<br>080–22293471<br>9916331961<br>9448556645 |
| 7<br>8<br>9<br>10<br>11 | ಬೆಳಗಾಂ<br>ಗದಗ<br>ಧಾರವಾಡ<br>ಉತ್ತರ ಕನ್ನಡ<br>ಹಾವೇರಿ | ** ಧಾರವಾಡ **<br>ವ್ಯವಸ್ಥಾಪಕರು,<br>ಎಲ್.ಐ.ಸಿ ಆಫ್ ಇಂಡಿಯಾ,<br>ಪಿ & ಜಿ.ಎಸ್ ಯುನಿಟ್<br>"ಜೀವನ್ ಪ್ರಕಾಶ್"<br>ಕಾಲೇಜು ರಸ್ತೆ.<br>ಪಿ.ಬಿ.ನಂ:14,<br>ಬೆಂಗಳೂರು–560002 | ಶ್ರೀ ಎಂ.ಅರ್ಜುನನ್ | 0836–2745864<br>0836–2770756<br>8277329393 |
| 12<br>13<br>14<br>15<br>16<br>17 | ಉಡುಪಿ<br>ಶಿವಮೊಗ್ಗ<br>ದಾವಣಗೆರೆ<br>ದಕ್ಷಿಣ ಕನ್ನಡ<br>ಚಿತ್ರದುರ್ಗ<br>ಚಿಕ್ಕಮಗಳೂರು | ** ಮಂಗಳೂರು **<br>ವಿಭಾಗೀಯ ವ್ಯವಸ್ಥಾಪಕರು,<br>ಎಲ್.ಐ.ಸಿ ಆಫ್ ಇಂಡಿಯಾ,<br>ಪಿ & ಜಿ.ಎಸ್ ಯುನಿಟ್,<br>ಪಾಪ್ಯೂಲರ್ ಬಿಲ್ಡಿಂಗ್,<br>3ನೇ ಮಹಡಿ,<br>ಪಿ.ಬಿ.ನಂ:17,<br>ಮಂಗಳೂರು–575001 | ಶ್ರೀಪಿ.ದೇವಪ್ಪ ನಾಯ್ಕ | 0824–2441248<br>0824–2492113<br>8242427824 |
| 18<br>19<br>20<br>21<br>22 | ಮೈಸೂರು<br>ಮಂಡ್ಯ<br>ಕೊಡಗು<br>ಚಾಮರಾಜನಗರ<br>ಹಾಸನ | ** ಮೈಸೂರು **<br>ವ್ಯವಸ್ಥಾಪಕರು,<br>ಎಲ್.ಐ.ಸಿ ಆಫ್ ಇಂಡಿಯಾ,<br>ಪಿ &ಜಿ.ಎಸ್ ಯುನಿಟ್<br>ಕೆ.ಆರ್.ಎಸ್.ರಸ್ತೆ,<br>ಎಲ್.ಐ.ಸಿ ಕಟ್ಟಡ,<br>ಮೈಸೂರು–570020 | ಶ್ರೀಹೆಚ್.<br>ಮಂಜುನಾಥ್ | 0821–2516061<br>944929828 |

| | | | | |
|---|---|---|---|---|
| 23<br>24<br>25<br>26<br>27<br>28<br>29<br>30 | ಯಾದಗಿರಿ<br>ರಾಯಚೂರು<br>ಕೊಪ್ಪಳ<br>ಬಿಜಾಪುರ<br>ಬೀದರ್<br>ಬಳ್ಳಾರಿ<br>ಗುಲ್ಬರ್ಗಾ<br>ಬಾಗಲಕೋಟೆ | ** ರಾಯಚೂರು **<br>ವ್ಯವಸ್ಥಾಪಕರು,<br>ಎಲ್.ಐ.ಸಿ ಆಫ್ ಇಂಡಿಯಾ,<br>ಪಿ & ಜಿ.ಎಸ್ ಯುನಿಟ್,<br>"ಜೀವನ್ ಪ್ರಕಾಶ್"<br>ಕಾಲೇಜು ರಸ್ತೆ.<br>ಪಿ.ಬಿ.ನಂ:43,<br>ಸ್ಟೇಷನ್ ರಸ್ತೆ,<br>ರಾಯಚೂರು –584101 | ಶ್ರೀ ಡಿ.ವಿರುಪಾಕ್ಷ | 08532–230019<br>08532–231054<br>9448467199 |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:–**

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ,
5ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ದೂರವಾಣಿ ಸಂಖ್ಯೆ: 080–22232040/22232012 ಫ್ಯಾಕ್ಸ್ ಸಂಖ್ಯೆ:–22232040
ಇ–ಮೇಲ್ ವಿಳಾಸ: *dssp2008@gmail.com Website : www.dssp.kar.nic.in*

## 10. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ

"ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ" ಗೆ ಬಿ.ಪಿ.ಎಲ್ ಕಾರ್ಡ್ ಹೊಂದಿರುವವರು ಯೋಜನೆಗೆ ನೊಂದಣಿ ಮಾಡಿಸಬಹುದಾಗಿದೆ. ನೊಂದಣಿಯಾದ ಫಲಾನುಭವಿ ಕುಟುಂಬದ 5 ಜನರಿಗೆ ಪ್ರತೀ ವರ್ಷ 30,000/– ರೂಗಳ ವರೆವಿಗೆ ಆಯ್ದ ಆಸ್ಪತ್ರೆಗಳಲ್ಲಿ ಚಿಕಿತ್ಸಾ ನೆರವು ಪಡೆಯಬಹುದಾಗಿದೆ.

ಫಲಾನುಭವಿಗಳು ಇಲಾಖೆ ನಿಗಧಿಪಡಿಸಿರುವ ಶುಲ್ಕ–30/– ರೂಗಳನ್ನು ನೀಡಿ ನೊಂದಣಿ ಮಾಡಿಸಬಹುದಾಗಿದೆ.
**ಸ್ಮಾರ್ಟ್ ಕಾರ್ಡ್ :**

- ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಗುರ್ತಿಸಲಾದ ಪಲಾನುಭವಿಗಳ ನೋಂದಣಿ ಪ್ರಕ್ರಿಯೆ ಸಂದರ್ಭದಲ್ಲಿ ಮಾತ್ರ ಒಂದು ಕುಟುಂಬದ ಗರಿಷ್ಠ ಐದು ಸದಸ್ಯರ/ಫಲಾನುಭವಿಗಳ ಬೆರಳಗುರುತು ಮತ್ತು ಛಾಯಾಚಿತ್ರಗಳನ್ನು ಸೆರೆಹಿಡಿದು ಬಯೋಮೆಟ್ರಿಕ್ 64ಕೆಬಿ ಸ್ಮಾರ್ಟ್‌ಕಾರ್ಡ್‌ಗಳನ್ನು ನೊಂದಣಿ ಸ್ಥಳದಲ್ಲಿಯೆ ವಿತರಣೆ.
- ದೇಶದಾದ್ಯಂತ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಆರ್.ಎಸ್.ಬಿ.ವೈ ಸ್ಮಾರ್ಟ್‌ಕಾರ್ಡ್‌ಗಳನ್ನು ಬಳಸಿಕೊಂಡು ಫಲಾನುಭವಿ ಕುಟುಂಬದವರು ವಾರ್ಷಿಕವಾಗಿ ಗರಿಷ್ಠ ರೂ 30,000/–ವರೆಗೆ ಒಳರೋಗಿಯಾಗಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದು

**ಪ್ರೀಮಿಯಂ ಪಾವತಿ ಮತ್ತು ವಿಮಾವ್ಯಾಪ್ತಿ**

- ಯೋಜನೆಗೆ ತಗಲುವ ಪ್ರೀಮಿಯಂ ಮೊತ್ತದಲ್ಲಿ ಕೇಂದ್ರ ಸರ್ಕಾರವು 75% ಹಾಗು ರಾಜ್ಯ ಸರ್ಕಾರವು 25% ರಷ್ಟನ್ನು ಭರಿಸುತ್ತದೆ
- ಫಲಾನುಭವಿಗಳು ನೋಂದಣಿ ಸಮಯದಲ್ಲಿ ರೂ 30/– ನೋಂದಣಿ ಶುಲ್ಕ ಮಾತ್ರ ಪಾವತಿಸ ಬೇಕಾಗುತ್ತದೆ.
- ಫಲಾನುಭವಿ ಕುಟುಂಬದ ಮುಖ್ಯಸ್ಥ, ಹೆಂಡತಿ/ಗಂಡ, ಮಕ್ಕಳು ಹಾಗೂ ಅವಲಂಬಿತರು ಸೇರಿದಂತೆ ಒಟ್ಟು ಗರಿಷ್ಠ ಐದು ಸದಸ್ಯರು ಈ ಸೌಲಭ್ಯವನ್ನು ಪಡೆಯಬಹುದು.
- ನೋಂದಣಿ ಸಂದರ್ಭದಲ್ಲಿ ಫಲಾನುಭವಿಗಳು ತಮ್ಮ ಕುಟುಂಬದ ಗರಿಷ್ಠ ಐದು ಸದಸ್ಯರೊಂದಿಗೆ ನಿಗದಿಪಡಿಸಲಾದ ಸ್ಥಳಕ್ಕೆ ಹಾಜರಾಗಿ ನೋಂದಣಿ ಮಾಡಿಸಿಕೊಳ್ಳಬಹುದು.

**ಆರ್ ಎಸ್ ಬಿ ವೈ ಯೋಜನೆಯ ವೈಶಿಷ್ಟ್ಯಗಳು**

- ವಿಮಾ ಯೋಜನೆಯಡಿಯಲ್ಲಿ ಶಸ್ತ್ರಚಿಕಿತ್ಸೆ ಸೇರಿದಂತೆ 1516 ಕ್ಕೂ ಹೆಚ್ಚು ಚಿಕಿತ್ಸಾ ಕ್ರಮಗಳಿಗೆ ಫಲಾನುಭವಿಗಳು ನೋಂದಾಯಿತ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಉಚಿತ ಚಿಕಿತ್ಸೆ ಪಡೆಯಬಹುದು
- ಚಿಕಿತ್ಸೆ ನಂತರ ಪ್ರತಿಭಾರಿ ರೂ 100 ರಂತೆ (ವಾರ್ಷಿಕ ರೂ 1000ಕ್ಕೆ ಮೀರದಂತೆ) ಪ್ರಯಾಣ ವೆಚ್ಚ ನೀಡಲಾಗುವುದು.
- ಒಂದೇ ಕುಟುಂಬದ ಫಲಾನುಭವಿ ಸದಸ್ಯರು ಬೇರೆ ಬೇರೆ ಸ್ಥಳಗಳಲ್ಲಿ ವಾಸವಿದ್ದಲ್ಲಿ ಅಂತಹ ಸಂದರ್ಭದಲ್ಲಿ ರೂ 30,000/– ಮೀರದಂತೆ, ಹೆಚ್ಚುವರಿಯಾಗಿ ಮತ್ತೊಂದು ಕಾರ್ಡ್ ಪಡೆಯುವ ಅವಕಾಶವಿದೆ.
- ಗುರುತಿಸಿರುವ ಎಲ್ಲಾ ಖಾಯಿಲೆಗಳು ಮತ್ತು ಹೆರಿಗೆ ಚಿಕಿತ್ಸೆ ವೆಚ್ಚ ಹಾಗೂ ವಿಮಾ ಅವಧಿಯಲ್ಲಿ ಜನಿಸುವ ಶಿಶುಗಳು ಸಹ ಉಚಿತ ಚಿಕಿತ್ಸೆ ಸೌಲಭ್ಯ ದೊರಕಲಿದೆ.

**ಸ್ಮಾರ್ಟ್ ಕಾರ್ಡ್‌ಗಳನ್ನು ಬಳಸುವ ವಿಧಾನ ವಿಮಾವ್ಯಾಪ್ತಿಗೆ ಒಳ ಪಡುವ ಖಾಯಿಲೆ ಮತ್ತು ಅವಶ್ಯವಿರುವ ಮೊತ್ತದ ಲಭ್ಯತೆ ಇದ್ದಲ್ಲಿ**

1. ಫಲಾನುಭವಿಯ ಗುರುತಿಸಲಾದ ಆಸ್ಪತ್ರೆಯಲ್ಲಿ ಸ್ಥಾಪಿತವಾಗಿರುವ ಆರ್.ಎಸ್.ಬಿ.ವೈ ಸಹಾಯಕರನ್ನು ಭೇಟಿಮಾಡಬೇಕು.
2. ಫಲಾನುಭವಿಯ ಬಳಿಇರುವ ಸ್ಮಾರ್ಟ್ ಕಾರ್ಡ್‌ನ್ನು ಪರೀಕ್ಷಿಸಲಾಗುತ್ತದೆ ಮತ್ತು ಸ್ಮಾರ್ಟ್ ಕಾರ್ಡ್ ಹೊಂದಿರುವವರ ಬಯೋಮೆಟ್ರಿಕ್ ವಿವರಗಳು ಬೆರಳು ಗುರುತು ಇತ್ಯಾದಿ ಹೊಂದಾಣಿಕೆಯನ್ನು ಪರೀಕ್ಷಿಸಲಾಗುತದೆ.
3. ಪರಿಶೀಲನೆಯ ನಂತರ ಫಲಾನುಭವಿಗೆ ತನ್ನ ಹೆಸರು ವಯಸ್ಸು ಹಾಗು ವಿಮಾ ಮೊತ್ತವುಳ್ಳ ಚೀಟಿಯನ್ನು ನೀಡಲಾಗುತ್ತದೆ.
4. ನಂತರ ಫಲಾನುಭವಿಯನ್ನು ವೈದ್ಯರ ಬಳಿ ಚಿಕಿತ್ಸೆಗೆ ಕಳುಹಿಸಲಾಗುತ್ತದೆ
5. ಚಿಕಿತ್ಸೆಗೆ ಒಳಪಡಿಸಿದ ನಂತರ ವೈದ್ಯರು ಪರಿಶೀಲನಾ ವರದಿ, ಖಾಯಿಲೆಯ ವಿವರ ಚಿಕಿತ್ಸೆಗಳ ವಿವರವುಳ್ಳ ವರದಿಯನ್ನು ನೀಡಲಾಗುತ್ತದೆ.
6. ಈ ವಿವರಗಳೊಂದಿಗೆ ಪಲಾನುಭವಿ ಪುನಃ ಆರ್.ಎಸ್.ಬಿ.ವೈ ಸಹಾಯಕರನ್ನು ಸಂಪರ್ಕಿಸಬೇಕು.
7. ‘ಸ್ಮಾರ್ಟ್ ಕಾರ್ಡ್’ ವಿವರಗಳನ್ನು ಪರಿಶೀಲಿಸಿ ಫಲಾನುಭವಿಗೆ ಯಾವ ಪ್ಯಾಕೆಜ್‌ನಡಿ ಚಿಕಿತ್ಸೆಯನ್ನು ನೀಡಬೇಕೆಂದು ನಿರ್ದರಿಸಲಾಗುತದೆ. ವಿವರಗಳನ್ನು ನೀಡಲು ಪಲಾನುಭವಿಗೆ ಬೆರಳಗುರುತಿನ ಅಗತ್ಯವಿರುತ್ತದೆ. ಬೆರಳುಗುರುತು

ನೀಡಲು ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಫಲಾನುಭವಿಯ ಕುಟುಂಬದ ಇತರೆ ಯಾವುದೇ ನೋಂದಾಯಿತ ಸದಸ್ಯರು ತಮ್ಮ ಬೆರಳು ಗುರುತನ್ನು ನೀಡಬಹುದು.

**ಸ್ಮಾರ್ಟ್ ಕಾರ್ಡ್ ಸುರಕ್ಷತೆ**

- ಸ್ಮಾರ್ಟ್ ಕಾರ್ಡ್‌ನ್ನು ಫಲಾನುಭವಿ ಜಾಗರೂಕತೆಯಿಂದ ಇಟ್ಟುಕೊಳ್ಳಬೇಕು.
- ಗುರುತಿಸಲ್ಪಟ್ಟ ಆಸ್ಪತ್ರೆಯಲ್ಲಿ ಸ್ಮಾರ್ಟ್ ಕಾರ್ಡ್ ಬಳಸಿ ಚಿಕಿತ್ಸೆ ಸೌಲಭ್ಯ ಪಡೆದ ನಂತರ ಆಸ್ಪತ್ರೆಯಿಂದ 'ಸ್ಮಾರ್ಟ್ ಕಾರ್ಡ್'ನ್ನು ಹಿಂಪಡೆದು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು.
- ಫಲಾನುಭವಿಯ ಸ್ಮಾರ್ಟ್ ಕಾರ್ಡ್ ಕಳೆದು ಹೋದಲ್ಲಿ, ಜಿಲ್ಲಾ ಕಿಯೊಸ್ಕ್ ಕಛೇರಿಯಲ್ಲಿ ರೂ30/- ಪಾವತಿಸಿ ಬದಲಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದು.

| **ಬೆಂಗಳೂರು ನಗರ ಜಿಲ್ಲಾ ಅರ್.ಸ್ ಬಿ ವೈ. ಆಸ್ಪತ್ರೆಯ ಪಟ್ಟಿ:** | | | | | |
|---|---|---|---|---|---|
| ಕ್ರ.ಸಂ | ಕ್ಷೇತ್ರ | ವಿಮಾ ಕಂಪನಿ | ಆಸ್ಪತ್ರೆ | ಸ್ಥಳ | ಸರ್ಕಾರಿ/ಖಾಸಗಿ ಆಸ್ಪತ್ರೆ |
| 3 | **ಮದುವೆಗೆ ಧನ ಸಹಾಯ** | 1. ಮಂಡಳಿಯ ಫಾರಂ–23 ರ ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.<br>2. ಈ ಸೌಲಭ್ಯವು ಫಲಾನುಭವಿಯ 2 ಮಕ್ಕಳಿಗೆ ಮಾತ್ರ ಸೀಮಿತ. ಅಥವಾ ಫಲಾನುಭವಿಯ ಮದುವೆಗೆ<br>3. ಮಂಡಳಿಯಲ್ಲಿ ನೋಂದಣಿಯಾದ ಗುರುತಿನ ಚೀಟಿಯು ಚಾಲ್ತಿಯಲ್ಲಿರಬೇಕು ಮತ್ತು ಮೂಲ ಪ್ರತಿಯನ್ನು ಅಟೆಸ್ಟೆಡ್ ಮಾಡಿ ಲಗತ್ತಿಸಬೇಕು.<br>4. ಫಲಾನುಭವಿಯ ಹೆಸರಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು.<br>5. ಉಪ ನೋಂದಣಾಧಿಕಾರಿಯವರ ಕಚೇರಿಯಿಂದ ಮದುವೆಯ ನೋಂದಣಿ ಪ್ರಮಾಣ ಪತ್ರವನ್ನು ಪಡೆದು ಅದರ ದೃಢೀಕೃತ ಪ್ರಮಾಣ ಪತ್ರವನ್ನು ಒದಗಿಸಬೇಕು.<br>6. ಮುಸ್ಲಿಂ ಜನಾಂಗದವರು ಮದುವೆ ನೆರವೇರಿಸಿರುವ ಬಗ್ಗೆ | ರೂ.50000.00 ದವರೆಗೆ : ಪಡೆಯಬಹುದು. |

| | | | |
|---|---|---|---|
| | | ಮಸೀದಿಯಲ್ಲಿ ನೀಡಲಾಗಿರುವ ದಫ್ತರ್‌ನ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.<br>7. ಕ್ರೈಸ್ತ ಜನಾಂಗದವರು ಮದುವೆ ನೆರವೇರಿಸಿರುವ ಬಗ್ಗೆ ಚರ್ಚ್‌ನಲ್ಲಿ ನೀಡಲಾಗಿರುವ ಮದುವೆಯ ನೋಂದಣಿ ಪ್ರಮಾಣ ಪತ್ರವನ್ನು ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು. | |
| **ಇ) ಎರಡು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯ:** | | | |
| 1 | **ಉಪಕರಣಗಳ ಖರೀದಿಗೆ ಧನಸಹಾಯ.** | 1. ಮಂಡಳಿಯ ಫಾರಂ–15 ರ ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.<br>2. ಈ ಸೌಲಭ್ಯವು ಫಲಾನುಭವಿಗೆ ಮಾತ್ರ ಒಂದು ಸಾರಿ ಸಿಗುತ್ತದೆ.<br>3. ಮಂಡಳಿಯಲ್ಲಿ ನೋಂದಣಿಯಾದ ಗುರುತಿನ ಚೀಟಿಯು ಚಾಲ್ತಿಯಲ್ಲಿರಬೇಕು ಮತ್ತು ಮೂಲ ಪ್ರತಿಯನ್ನು ಅಟೆಸ್ಟೆಡ್ ಮಾಡಿ ಲಗತ್ತಿಸಬೇಕು.<br>4. ಫಲಾನುಭವಿಯ ಹೆಸರಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು.<br>5. ಫಲಾನುಭವಿಗೆ ವಯಸ್ಸು 55ರ ಒಳಗೆ ಇರಬೇಕು.<br>6. ಫಲಾನುಭವಿಯು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಕೆಲಸಗಳ ಬಗ್ಗೆ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ಸ್‌ನಲ್ಲಿ ಅಥಾವ ಎಮ್‌ಪ್ಲಾಯ್‌ಮೆಂಟ್ ಅಂಡ್ ಟ್ರೇನಿಂಗ್ ಸಂಸ್ಥೆಯಿಂದ ಸ್ಥಾಪಿಸಲಾಗಿರುವ ಕನ್‌ಸ್ಟ್ರಕ್ಷನ್ ಟ್ರೇನಿಂಗ್ ಅಕಾಡೆಮಿ ಅಥವಾ ಮಂಡಳಿಯಿಂದ ಸ್ಥಾಪಿಸಲ್ಪಡುವ ಈ ತರಹದ ಸಂಸ್ಥೆಗಳಲ್ಲಿ ತರಬೇತಿ ಪಡೆದಿರಬೇಕು.<br>7. ಟ್ರೇನಿಂಗ್ ಅನ್ನು ಸ್ಕಿಲ್ ಅಕ್ವಿಸಿಷನ್/ಸ್ಕಿಲ್ ಅಪ್‌ಗ್ರೇಡೇಷನ್‌ನಲ್ಲಿ ಪಡೆದುಕೊಂಡಿದ್ದಕ್ಕೆ ಫಲಾನುಭವಿಯು ಒರಿಜಿನಲ್ ಸರ್ಟಿಫಿಕೇಟ್ ಮತ್ತು ಪ್ರಖ್ಯಾತಿ ಹೊಂದಿದ ಸಪ್ಲೈಯರ್‌ನಿಂದ ಉಪಕರಣ ಖರೀದಿಸಿದಕ್ಕೆ ನೀಡಲ್ಪಡುವ ಒರಿಜನಲ್ ವೋಚರ್ ಅನ್ನು ಅರ್ಜಿಯ ಜೊತೆ ಲಗತ್ತಿಸಬೇಕು.<br>8. ಮಂಡಳಿಯ ಫಲಾನುಭವಿಯು ಯಾವ ಟ್ರೇನಿಂಗ್ ಸೆಂಟರ್‌ನಲ್ಲಿ ಟ್ರೇನಿಂಗ್‌ನ್ನು ಪಡೆದಿದ್ದಾರೆ ಎಂಬುದನ್ನು ದೃಢಪಡಿಸಿಕೊಂಡ ನಂತರ ಮಂಡಳಿಯಿಂದ ಮಂಜೂರಾಗಿರುವ ಧನಸಹಾಯವನ್ನು ಸಪ್ಲೈಯರ್‌ಗೆ ಪಾವತಿಸಲಾಗುತ್ತದೆ. | ರೂ.5000.00 |
| **ಐದು ವರ್ಷ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯ:** | | | |
| 1 | **ಪಿಂಚಣಿ ಯೋಜನೆ. (ನಿಯಮ –39)** | 1. ಮಂಡಳಿಯ ಫಾರಂ–12 ರ ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.<br>2. ಫಲಾನುಭವಿಗೆ 60ವರ್ಷ ವಯಸ್ಸಾಗಿರಬೇಕು. | ರೂ.1000.00 ಪ್ರತಿ ತಿಂಗಳು |

| | | | |
|---|---|---|---|
| | | 3. ಮಂಡಳಿಯಲ್ಲಿ ನೋಂದಣಿಯಾದ ಗುರುತಿನ ಚೀಟಿ ಚಾಲ್ತಿಯಲ್ಲಿದ್ದು ಅದರ ಮೂಲ ಪ್ರತಿಯನ್ನು ಲಗತ್ತಿಸಬೇಕು.<br>4. ಫಲಾನುಭವಿಯ ಹೆಸರಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು. | |
| 2 | **ಮನೆ ಕಟ್ಟಲು/ಖರೀದಿಸಲು ಧನಸಹಾಯ** | 1. ಯೋಜನೆ ಮತ್ತು ಅಂದಾಜು (ಮಂಜೂರಾದ)<br>2. ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ – 14 ವರ್ಷದ್ದು.<br>3. ಸ್ಥಳ ಪ್ರಮಾಣ ಪತ್ರ.<br>4. ಭೂಮಿತೆರಿಗೆಯ ರಶೀದಿ.<br>5. ಮೂಲಭೂತ ದಾಖಲೆಗಳು<br>6. ಅರ್ಜಿಯ ನಿರ್ವಹಣೆಗಾಗಿ ಪಡಿತರಚೀಟಿಯ ದೃಡೀಕೃತ ಪ್ರತಿ (ಪುಟ 2,4)<br>7. ಕಟ್ಟಡದ ಮಾಲೀಕತ್ವ (ನಿರ್ವಹಣೆಗೆ ಮಾತ್ರ)<br>8. ಅಂತಿಮ ಸೌಲಭ್ಯದ ದೃಢೀಕರಣ (ಟ್ರರ್ಮಿನಲ್ ಬೆನಿಫಿಟ್ ಡಿಕ್ಲರೇಷನ್)<br>9. ಫಲಾನುಭವಿಯ ಹೆಸರಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು.<br>10. ಮಂಡಳಿಯಲ್ಲಿ ನೋಂದಣಿಯಾದ ಗುರುತಿನ ಚೀಟಿಯು ಚಾಲ್ತಿಯಲ್ಲಿರಬೇಕು ಮತ್ತು ಮೂಲ ಪ್ರತಿಯನ್ನು ಅಟೆಸ್ಟೆಡ್ ಮಾಡಿ ಲಗತ್ತಿಸಬೇಕು.<br>11. ಟೈಟಲ್ ಕ್ಲಿಯರೆನ್ಸ್ ಸರ್ಟಿಫಿಕೇಟ್.<br>12. ಕಟ್ಟಡ ವಯಸ್ಸಿನ ಪ್ರಮಾಣ ಪತ್ರ.<br>13. ಆಸ್ತಿ ಮೌಲ್ಯ ಮಾಪನದ ಪ್ರಮಾಣ ಪತ್ರ.<br>14. ಕಟ್ಟಡ ನಿರ್ಮಾಣಕ್ಕೆ ಅಧಿಕಾರಿಗಳಿಂದ ಆಕ್ಷೇಪಣೆ ಇರುವುದಿಲ್ಲ ಎನ್ನುವುದರ ಬಗ್ಗೆ ಪ್ರಮಾಣ ಪತ್ರ.<br>15. ಅರ್ಜಿದಾರರಿಂದ ಅವನು/ಅವಳು ಅಥವಾ ಹೆಂಡತಿ/ಗಂಡ/ಮಕ್ಕಳಿಗೆ ಸ್ವಂತ ಮನೆ ಇರುವುದಿಲ್ಲವೆಂದು ಘೋಷಣೆ ಪ್ರಮಾಣ ಪತ್ರ.<br>16. ಮಾರ್ಟ್‌ಗೇಜ್‌ಡೀಡ್ ಅನ್ನು ಪ್ರತ್ಯೇಕವಾಗಿ ಸಹಿ ಮಾಡಬೇಕಾಗುತ್ತದೆ. | |
| | | **ನೋಂದಣಿಯಾಗದ ನಿರ್ಮಾಣ ಕಾರ್ಮಿಕರಿಗೆ ದೊರಕುವ ಸೌಲಭ್ಯ:** | |
| 1 | **ಅಪಘಾತದಿಂದ ಮೃತರಾದಲ್ಲಿ ಅವರ ಅವಲಂಭಿತ ಅನುಗ್ರಹ ರಾಶಿ** | 1. ಮಂಡಳಿಯ ಫಾರಂ–21 – ಎ ರ ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.<br>2. ಮಂಡಳಿಯಲ್ಲಿ ನೋಂದಣಿಯಾದ ಗುರುತಿನ ಚೀಟಿಯು ಚಾಲ್ತಿಯಲ್ಲಿರಬೇಕು ಮತ್ತು ಮೂಲ ಪ್ರತಿಯನ್ನು ಅಟೆಸ್ಟೆಡ್ ಮಾಡಿ ಲಗತ್ತಿಸಬೇಕು.<br>3. ಅರ್ಜಿ ನಮೂನೆ –6 ರಲ್ಲಿ  ನಾಮ ನಿರ್ದೇಶನ ಅರ್ಜಿ ಸಲ್ಲಿಸಬೇಕು.<br>4. ತಹಶೀಲ್ದಾರ್ ರವರಿಂದ ಪಡೆದ ವಾರಸುದಾರರ ಪ್ರಮಾಣ | ರೂ.50000.00 **ದವರೆಗೆ : ಪಡೆಯಬಹುದು.** |

| | | | |
|---|---|---|---|
| | | ಪತ್ರ.<br>5. ಮರಣ ಹೊಂದಿದ ಫಲಾನುಭವಿಯ ಗಣಕೀಕೃತ ಮೂಲ ಮರಣ ಪ್ರಮಾಣ ಪತ್ರ ನೀಡುವುದು.<br>6. ನಾಮ ನಿರ್ದೇಶಿತರ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು. | |
| 2 | **ಅಪಘಾತದಲ್ಲಿ ಗಂಭೀರ ಗಾಯಗೊಂಡಲ್ಲಿ** | 1. ಮಂಡಳಿಯ ಫಾರಂ–21(ಸಿ) ರ ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.<br>2. ಚಿಕಿತ್ಸೆಗೆ ಒಳಪಟ್ಟಿದಲ್ಲಿ ಆಸ್ಪತ್ರೆಗೆ ದಾಖಲಾದ ಮತ್ತು ಬಿಡುಗಡೆಯಾದ ಮೂಲ ಬಿಡುಗಡೆ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.<br>3. ಫಲಾನುಭವಿಯ ಹೆಸರಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸಬೇಕು.<br>4. ಗಾಯಗೊಂಡ ಕಾರ್ಮಿಕನು ಶಸ್ತ್ರ ಚಿಕಿತ್ಸೆಯಾಗಿರುವುದಕ್ಕೆ ಅಥವಾ ಚಿಕಿತ್ಸೆ ಪಡೆದಿರುವುದಕ್ಕೆ ಆಸ್ಪತ್ರೆಯ ವೈಧ್ಯರಿದ ನಮೂನೆ –21(ಡಿ) ರಲ್ಲಿ ವೈದ್ಯಕೀಯ ವರದಿ ಒದಗಿಸಬೇಕು.<br>5. ಗಾಯಗೊಂಡ ಕಾರ್ಮಿಕನು ಅಪಘಾತ ಹೊಂದಿದ ಕಟ್ಟಡದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಕಾರ್ಮಿಕ ಅಧಿಕಾರಿಯಿಂದ ನಮೂನೆ –21(ಇ) ರಲ್ಲಿ ವರದಿ.<br>6. ಕೆಲಸ ನಿರ್ವಹಿಸುತ್ತಿರುವಾಗ ಅಪಘಾತ ಸಂಭವಿಸಿರುವುದಕ್ಕೆ ಪೋಲಿಸ್ ದೂರು ದಾಖಲಾಗಿದ್ದಲ್ಲಿ ಅದರ ಎಫ್‌ಐಆರ್ ಪ್ರತಿಯನ್ನು ಲಗತ್ತಿಸಬೇಕು. | **ರೂ.10000.00 ದವರೆಗೆ : ಪಡೆಯಬಹುದು.** |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:**

ಜಂಟಿ ಕಾರ್ಯದರ್ಶಿಗಳು

ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.

ದೂರವಾಣಿ ಸಂಖ್ಯೆ–080–26644312/ 26644313/6644314/ 26644315.

*Web:- www.karbuildingworkerswelfare.org*

*e-mail:- karbuildingworkerswelfare@gmail.com*

ಉಚಿತ ದೂರವಾಣಿ ಕರೆ – 18004252838

# ಕಾರ್ಮಿಕರ ಸೇವೆಯಲ್ಲಿ ಕಲ್ಯಾಣ ಮಂಡಳಿ

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರಡಿಯಲ್ಲಿ ಸ್ಥಾಪಿಸಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಅವರ ಅವಲಂಬಿತರು, ಮಹಿಳೆಯರು, ಅಂಗವಿಕಲರು ಮತ್ತು ಕಾರ್ಮಿಕ ಮಕ್ಕಳ ಕ್ಷೇಮೋಭಿವೃದ್ಧಿಗೆ ಮಂಡಳಿಯು ಅನೇಕ ಯೋಜನೆಗಳನ್ನು ರೂಪಿಸಿದೆ, ಆ ಯೋಜನೆಗಳು ಕೆಳಗಿನಂತಿರುತ್ತದೆ.

## 1. ವಿದ್ಯಾರ್ಥಿ ವೇತನ ಯೋಜನೆಯ ನಿಯಮಗಳು:

ಮಂಡಳಿಗೆ ವಂತಿಗೆ ಸಲ್ಲಿಸುವ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರ ಮಕ್ಕಳು, ಈ ಮಂಡಳಿಯಿಂದ ವಿದ್ಯಾರ್ಥಿ ವೇತನ ಪಡೆಯಲು ಅರ್ಜಿಗಳನ್ನು ಸಲ್ಲಿಬಹುದು.

**ಅರ್ಜಿ ಸಲ್ಲಿಸಲು ಅರ್ಹತೆ:**

| | |
|---|---|
| ವಿದ್ಯಾರ್ಥಿಯು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಕನಿಷ್ಟ ಶೇ. 40 ಅಂಕಗಳನ್ನು ಪಡೆದಿರಬೇಕು | ಪರಿಶಿಷ್ಟ ಜಾತಿ, ವರ್ಗದವರಾದರೆ ಶೇ. 35 ರಷ್ಟು ಅಂಕಗಳನ್ನು ಪಡೆದಿರಬೇಕು. |
| ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರ ಮಾಸಿಕ ವರಮಾನ ರೂ. 5,000/ ಕ್ಕಿಂತ ಹೆಚ್ಚು ಇರಬಾರದು. | ವಿದ್ಯಾರ್ಥಿ ವೇತನವನ್ನು ಜಿಲ್ಲಾವಾರು ಮೆರಿಟ್ ಮತ್ತು ಅರ್ಹತೆಯನ್ನು ಪರಿಗಣಿಸಿ ನೀಡಲಾಗುವುದು. |
| ವಿದ್ಯಾರ್ಥಿಗಳು, ಯಾವುದೇ ಮೂಲದಿಂದ ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ಅವರು ಈ ಯೋಜನೆಯ ಲಾಭಕ್ಕೆ ಅರ್ಹರಲ್ಲ. | |

**ವಿದ್ಯಾರ್ಥಿ ವೇತನಕ್ಕೆ ವಿದ್ಯಾರ್ಹತೆ ಮಟ್ಟ.:**

| | |
|---|---|
| 8ನೇ ತರಗತಿಯಿಂದ ಪದವಿ, ಸ್ನಾತಕೋತ್ತರ ಹಾಗೂ ಎಲ್ಲಾ ರೀತಿಯ ತಾಂತ್ರಿಕ ಮತ್ತು ವೈದ್ಯಕೀಯ ಹಾಗೂ ವೃತ್ತಿ ಸಂಬಂಧಿತ ಕೋರ್ಸ್‌ಗಳು, ಲಲಿತ ಕಲೆ ಇತ್ಯಾದಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು. | ವಿದ್ಯಾರ್ಥಿ ವೇತನದ ಮೌಲ್ಯ ವಾರ್ಷಿಕ ಕನಿಷ್ಠ ರೂ. 1000/– ರಿಂದ ಗರಿಷ್ಠ ರೂ. 2,500/– ರವರೆಗೆ ವಿದ್ಯಾಭ್ಯಾಸತಕ್ಕಂತೆ ವಿದ್ಯಾರ್ಥಿ ವೇತನ ನೀಡಲಾಗುವುದು. |

**ಅರ್ಜಿ ದೊರೆಯುವ ಸ್ಥಳ:–**

ಬೆಂಗಳೂರಿನಲ್ಲಿ, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಕಛೇರಿ ಹಾಗೂ ಆಯಾಯಾ ಜಿಲ್ಲಾ ಉಪಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ನಿರೀಕ್ಷಕರ ಕಛೇರಿ.

**ಅರ್ಜಿಗೆ ಲಗತ್ತಿಸಬೇಕಾದ ದಾಖಲೆಗಳು.**

| | |
|---|---|
| ವಿದ್ಯಾರ್ಥಿ ಹಿಂದಿನ ಪರೀಕ್ಷೆಯಲ್ಲಿ ಪಾಸದ ಪರೀಕ್ಷೆಯ ಅಂಕ ಪಟ್ಟಿಯನ್ನು ಶಾಲಾಮುಖ್ಯಸ್ಥರು ದೃಢೀಕರಿಸಬೇಕು | ಸಂಬಂಧಿಸಿದ ಶಾಲೆ ಕಾಲೇಜಿನ ಮುಖ್ಯಾಧಿಕಾರಿಗಳ ಪ್ರಮಾಣ ಪತ್ರವನ್ನು ಅನುಸೂಚಿ 'ಇ' ನಲ್ಲಿ ನಮೂದಿಸಿ ದೃಢೀಕರಿಸಬೇಕು. |
| ತಂದೆ/ತಾಯಿ/ಪೋಷಕರು ಕೆಲಸ ಮಾಡುವ ಸಂಸ್ಥೆಯಿಂದ ಪಡೆದ ವೇತನ ದೃಢೀಕರಣವನ್ನು ಅನೂಸೂಚಿ 'ಆ' ನಲ್ಲಿ ನಮೂದಿಸಿ ದೃಢೀಕರಿಸಿರಬೇಕು. | ಎಲ್ಲಾ ಪ್ರಮಾಣ ಪತ್ರಗಳು ನಿಗದಿತ ನಮೂನೆಯಲ್ಲಿರಬೇಕು. |
| ಪರಿಶಿಷ್ಟ ಜಾತಿ, ವರ್ಗದವರು ಜಾತಿ ಪ್ರಮಾಣ ಪತ್ರದ ಛಾಯ ಪ್ರತಿ ಲಗತ್ತಿಸಿರಬೇಕು | **ಕೊನೆಯ ದಿನಾಂಕ** ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಸ್ವೀಕರಿಸಲು, ಪ್ರತಿ ವರ್ಷ ಸೆಪ್ಟಂಬರ್ |

| | |
|---|---|
| | 30, ಕೊನೆಯ ದಿನಾಂಕವಾಗಿರುವುದು.<br>ವಿದ್ಯಾರ್ಥಿ ವೇತನ ಮಂಜೂರಾತಿ ವಿಷಯದಲ್ಲಿ ಕಲ್ಯಾಣ ಆಯುಕ್ತರ ತೀರ್ಮಾನವೇ ಅಂತಿಮವಾದದ್ದು.<br>ಈ ಸಂಬಂಧವಾದ, ಅನಾವಶ್ಯಕ ಪತ್ರ ವ್ಯವಹಾರಗಳಿಗೆ ಅವಕಾಶವಿಲ್ಲ. |

**ವಿವಿಧ ತರಗತಿಗಳಿಗೆ ನಿಗದಿ ಪಡಿಸಿರುವ ವಿದ್ಯಾರ್ಥಿ ವೇತನದ ವಿವರಗಳು.**

| | | |
|---|---|---|
| ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳಿಗೆ ಅವರ ಶಾಲಾ ಕಾಲೇಜುಗಳ ಮುಖ್ಯಸ್ಥರ/ ಪ್ರಾಂಶುಪಾಲರ ಹೆಸರಿಗೆ ಕಳುಹಿಸಲಾಗುವುದು. | ಪ್ರೌಢ ಶಾಲೆ 8 ರಿಂದ 10 ನೇ ತರಗತಿಗೆ. | ರೂ.1,000/- |
| | ಪಿ.ಯು.ಸಿ. ಐ.ಟಿ.ಐ. ಡಿಪ್ಲೊಮಾ ಟಿ.ಸಿ.ಹೆಚ್ | ರೂ.1500/- |
| | ಬಿ.ಎ. ಬಿ.ಕಾಂ., ಬಿ.ಎಸ್ಸಿ, ಬಿ.ಫಾರ್ಮ, ಬಿ.ಬಿ.ಎಂ. ಬಿ.ಸಿ.ಎ., ಎಲ್.ಎಲ್.ಬಿ. | ರೂ.1700/- |
| | ಸ್ನಾತಕೋತ್ತರ:ಎಂ.ಎ.,ಎಂ.ಕಾಂ., ಎಂ.ಎಸ್ಸಿ.,ಎಂ.ಫಾರ್ಮ,ಎಂ.ಎಸ್.ಡಬ್ಲ್ಯೂ, ಎಂ.ಲಿಬ್., ಎಂ.ಸಿ.ಎ. | ರೂ.2000/- |
| | ತಾಂತ್ರಿಕ ಹಾಗೂ ವೈದ್ಯಕೀಯ: ಬಿ.ಇ., ಎಂ.ಬಿ.ಬಿ.ಎಸ್.ಬಿ.ಎಸ್ಸಿ(ಕೃಷಿ), ಪಶು ವೈದ್ಯಕೀಯ (ವೆಟರ್ನರಿ), ಎಂ.ಎಸ್. ಎಂ.ಡಿ | ರೂ.2500/- |

**ಸೂಚನೆ:-** ಎಸ್‌ಎಸ್‌ಎಲ್‌ಸಿ/ಪಿಯುಸಿ ಪರೀಕ್ಷೆಗಳಲ್ಲಿ ಶೇಕಡ 70% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಕಾರ್ಮಿಕ ಮಕ್ಕಳಿಗೆ ಈ ಕೆಳಗಿನಂತೆ ಪ್ರೋತ್ಸಾಹ ಧನ ನೀಡಲಾಗುವುದು ಪ್ರತಿ ಜಿಲ್ಲೆಗೆ ಒಟ್ಟು 10 ವಿದ್ಯಾರ್ಥಿಗಳಿಗೆ ಮಾತ್ರ ಈ ಮೌಲ್ಯ ಸೀಮಿತವಾಗಿದೆ. (5 ಎಸ್‌ಎಸ್‌ಎಲ್‌ಸಿ, 5 ಪಿಯುಸಿ ) ಎಸ್‌ಎಸ್‌ಎಲ್‌ಸಿಗೆ ರೂ. 1,000/-, ಪಿಯುಸಿ ರೂ. 1,500/-

**2. ಕಾರ್ಮಿಕರಿಗೆ ವೈಧ್ಯಕೀಯ ನೆರವು ಯೋಜನೆ**

**ಯೋಜನೆಯ ವ್ಯಾಪ್ತಿ ಮತ್ತು ಅರ್ಹತೆ:**

1. ಈ ಯೋಜನೆಯ ಲಾಭ ಪಡೆಯಲು ಕಾರ್ಮಿಕರು 18 ರಿಂದ 60 ವರ್ಷದ ವಯೋಮಿತಿಯಲ್ಲಿರಬೇಕು.
2. ಈ ಯೋಜನೆಯ ಲಾಭ ಪಡೆಯಲು ಕಾರ್ಮಿಕರು ಕೆಲಸ ಮಾಡುವ ಸಂಸ್ಥೆಯು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ 1965 ರ ಸೆಕ್ಷನ್ 7ರ ಪ್ರಕಾರ ಕನಿಷ್ಠ ಹಿಂದಿನ ಮೂರು ವರ್ಷ ಸತತವಾಗಿ ಮಂಡಳಿಗೆ ವಂತಿಕೆ ಪಾವತಿಸಿರಬೇಕು.
3. ಸಹಾಯ ಧನ ಕೋರುವ ಕಾರ್ಮಿಕರ ಮಾಹೆಯಾನ ಸಂಬಳ ರೂ.7,500/ ಕ್ಕಿಂತ ಹೆಚ್ಚಾಗಿರಬಾರದು. (ಅಸಾಧಾರಣ ಸಂದರ್ಭಗಳಲ್ಲಿ ಈ ಮಿತಿಯನ್ನು ಸಡಲಿಸುವ ಅಧಿಕಾರ ಮಂಡಳಿಗಿದೆ.)
4. ಈ ಯೋಜನೆ ಲಾಭ ಪಡೆಯುವ ಕಾರ್ಮಿಕರ ಮನೆಯಲ್ಲಿ ಬೇರಾರು ದುಡಿಯುವ ಸದಸ್ಯರಿರಬಾರದು.
5. ಈ ಯೋಜನೆಯ ಲಾಭ ಬಯಸುವವರು ಈ ಯೋಜನೆಯಡಿ, ಈ ಕಛೇರಿ ನಿಗದಿಪಡಿಸಿರುವ ಅರ್ಜಿ ನಮೂನೆಯನ್ನು ಈ ಕಛೇರಿಯಿಂದ ಪಡೆದು ಭರ್ತಿ ಮಾಡಿ, ವೈದ್ಯಕೀಯ ಮತ್ತು ಇತರೆ ಎಲ್ಲ ದಾಖಲೆಗಳ ಛಾಯಾ ಪ್ರತಿಗಳನ್ನು ಲಗತ್ತಿಸತಕ್ಕದ್ದು.
6. ಈ ಯೋಜನೆಯ ಲಾಭ ಪಡೆಯಲು ಬಯಸುವ ಕಾರ್ಮಿಕರು, ಅನಾರೋಗ್ಯಕ್ಕೊಳಗಾದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಬೇಕು.

**ಸಹಾಯ ಧನದ ವಿವರಗಳು ಈ ಕೆಳಗಿನಂತಿರುತ್ತದೆ:**

| **ದೊಡ್ಡ ಪ್ರಕರಣಗಳು** | **ಗರಿಷ್ಠ ಸಹಾಯ ಧನ** |
|---|---|
| ತೆರೆದ ಹೃದಯ ಶಸ್ತ್ರ ಚಿಕಿತ್ಸೆ | ರೂ. 10,000/ ಅಥವಾ ಮಂಡಳಿ ನಿರ್ಣಯಿಸಿದಂತೆ. |
| ಮೂತ್ರಪಿಂಡ ಶಸ್ತ್ರ ಚಿಕಿತ್ಸೆ | ರೂ.10,000/ ಅಥವಾ ಮಂಡಳಿ ನಿರ್ಣಯಿಸಿದಂತೆ. |
| ಆ್ಯಂಜಿ ಓ ಪ್ಲಾಸ್ಟಿ | ರೂ. 5,000/ |
| ತೆರೆದ ಹೃದಯ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್ ಹೊರತುಪಡಿಸಿ ಬೇರೆ ಎಲ್ಲ ದೊಡ್ಡ ಶಸ್ತ್ರ ಚಿಕಿತ್ಸೆಗೆ | ರೂ. 5,000/– ಮೀರದಂತೆ |
| ದೊಡ್ಡ ಖಾಯಿಲೆಗಳಿಗೆ | ರೂ. 5,000/– ಮೀರದಂತೆ |
| ದೀರ್ಘ ಕಾಲದ ರೋಗಗಳಾದ ಟಿ.ಬಿ. ಕ್ಯಾನ್ಸರ್, ಮುಂತಾದವುಗಳಿಗೆ. ಕಾರ್ಮಿಕನ ವೇತನ ರಹಿತ ರಜೆ ಅವಧಿಗೆ ತಿಂಗಳಿಗೆ | ರೂ. 5,000/– ಮೀರದಂತೆ |
| ಅಪಾಯಕಾರಿ ಉದ್ಯೋಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ, ನಿಯತಕಾಲಿಕ ಆರೋಗ್ಯ ತಪಾಸಣೆಯನ್ನು ಪ್ರಾದೇಶಿಕ ವೃತ್ತಿ ಆರೋಗ್ಯ ತಪಾಸಣೆ ಕೇಂದ್ರದಲ್ಲಿ ತಪಾಸಿಸಿಕೊಳ್ಳಲು ತಗಲುವ ವೆಚ್ಚ ಭರಿಸಲಾಗದ ಕಾರ್ಮಿಕರಿಗೆ | ಪ್ರತಿ ಆರೋಗ್ಯ ತಪಾಸಣೆಗೆ ರೂ. 100/– ರಿಂದ 300/– |

**ಈ ಕೆಳಗಿನ ಪ್ರಕರಣಗಳಲ್ಲಿ ಈ ಯೋಜನೆ ಲಾಭ ದೊರೆಯುವುದಿಲ್ಲ.**

| | |
|---|---|
| ಆತ್ಮಹತ್ಯೆ, ಸ್ವಯಂ ಗಾಯ ಮಾಡಿಕೊಳ್ಳುವುದು, ಬುದ್ದಿಭ್ರಮಣೆ ಪ್ರಕರಣಗಳು | ಲೈಂಗಿಕ ರೋಗಕ್ಕೆ ಸಂಬಂಧಿಸಿದ ಪ್ರಕರಣಗಳು. |
| ಮದ್ಯಪಾನ ಮತ್ತು ಡ್ರಗ್ಸ್ ವ್ಯಾಪಾರಿಗಳಿಗೆ ತಗಲುವ ರೋಗಗಳು | ಹೆರಿಗೆ. |
| ಮಾನಸಿಕ ಅಸ್ವಸ್ಥತೆ ಮತ್ತು ಮನೋವಿಕಾರದ ಪ್ರಕರಣಗಳು. | |

1. **ಮೃತ ಕಾರ್ಮಿಕನ ಕುಟುಂಬಕ್ಕೆ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ ಯೋಜನೆ.**

1) ಈ ಯೋಜನೆಯ ಲಾಭ ಪಡೆಯಲು ಕಾರ್ಮಿಕರು ಕೆಲಸ ಮಾಡುವ ಸಂಸ್ಥೆಯು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ **ಕಾಯಿದೆ** 1965 ರ ಸಕ್ಷನ್ 7ರ ಪ್ರಕಾರ ಮಂಡಳಿಗೆ ವಂತಿಕೆ ಪಾವತಿಸಿರಬೇಕು.
2) ಈ ಯೋಜನೆಯ ಲಾಭ ಪಡೆಯಬಯಸುವ ಮೃತ ಕುಟುಂಬದ ಅವಲಂಬಿತರು, ಈ ಯೋಜನೆಯಡಿ, ಈ ಕಛೇರಿ ಸಿದ್ಧಪಡಿಸಿರುವ, ಅರ್ಜಿ ನಮೂನೆಯನ್ನು ಈ ಕಛೇರಿಯಿಂದ ಪಡೆದು ಭರ್ತಿ ಮಾಡಿ ಕಲ್ಯಾಣ ಆಯುಕ್ತರಿಗೆ ಸಲ್ಲಿಸಬೇಕು.
3) ಅರ್ಜಿ ಜೋತೆಯಲ್ಲಿ ಮರಣ ಪ್ರಮಾಣ ಪತ್ರ, ಮೃತರ ಭಾವಚಿತ್ರ ಮತ್ತು ಉದ್ಯೋಗ ಸಂಸ್ಥೆಯ ದೃಢೀಕರಣಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.

**2. ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಗಣಕಯಂತ್ರ ತರಬೇತಿ ಯೋಜನೆ.**

ಯೋಜನೆಯ ಅರ್ಹತೆ:

ಅ) ಈ ಯೋಜನೆಯ ಲಾಭ ಪಡೆಯಲಿಚ್ಚಿಸುವವರು 18 ರಿಂದ 40 ವರ್ಷ ವಯೋಮಿತಿಯಲ್ಲಿರಬೇಕು.

ಆ) ಅಭ್ಯರ್ಥಿಯು ಕನಿಷ್ಠ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರಬೇಕು ನಿರುದ್ಯೋಗಿ ಪದವೀಧರ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಇ) ಈ ಯೋಜನೆಯ ಲಾಭ ಪಡೆಯುವ ಕಾರ್ಮಿಕರ ಮಾಸಿಕ ಸಂಬಳ ರೂ. 5000/–ಕ್ಕಿಂತ ಹೆಚ್ಚಿಗೆ ಇರಬಾರದು.

ಈ) ಕಾರ್ಮಿಕರ ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಒಂದು ಬ್ಯಾಚಿನಲ್ಲಿ ಈ ಯೋಜನೆಯ ಲಾಭ ದೊರೆಯುವುದು, ಹಾಗೂ ಒಟ್ಟಾರೆ ಒಂದು ಕುಟುಂಬದ ಇಬ್ಬರು ಅಭ್ಯರ್ಥಿಗಳು ಮಾತ್ರ ಈ ಯೋಜನೆ ಲಾಭ ಪಡೆಯಲು ಅರ್ಹರಾಗಿರುತ್ತಾರೆ.

ಉ) ಈ ಯೋಜನೆಯಡಿ ಬರುವ ಅರ್ಜಿಗಳಲ್ಲಿ ಹೆಚ್ಚಿನ ಪ್ರತಿಭೆ ಹಾಗೂ ಕಡಿಮೆ ಆದಾಯ ಇರುವ ಕಾರ್ಮಿಕರ ಮಕ್ಕಳಿಗೆ ಆಧ್ಯತೆ ನೀಡಲಾಗುವುದು.

ಊ) ಅಭ್ಯರ್ಥಿಯ ಆಯ್ಕೆ ವಿಚಾರದಲ್ಲಿ ಕಲ್ಯಾಣ ಆಯುಕ್ತರ ತೀರ್ಮಾನವು ಅಂತಿಮವಾದುದು.ಅನಗತ್ಯ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

ಋ) ಕಾರ್ಮಿಕರ ಜೀವನ ಕೌಶಲ್ಯ ಮತ್ತು ವ್ಯಕ್ತಿತ್ವ ಸುಧಾರಣೆ (*Life skill and personality development programme*) ತರಬೇತಿ ನೀಡುವುದರ ಮೂಲಕ ಕಾರ್ಮಿಕ ಕುಟುಂಬದ ಸದಸ್ಯರಿಗೆ ರೂಡ್‌ಸೆಟ್ ಸಂಸ್ಥೆಗಳ ಮೂಲಕ ಅಲ್ಪಾವಧಿ ತರಬೇತಿಗಳನ್ನು ಜಿಲ್ಲಾ ಮಟ್ಟದಲ್ಲಿ ನಡೆಸಲು ಪ್ರೇರೇಪಿಸಿ ಧನಸಹಾಯ ನೀಡಲು ತೀರ್ಮಾನಿಸಿರುತ್ತದೆ.

**3. ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್ ಒದಗಿಸುವ ಯೋಜನೆ.**

1. **ಯೋಜನೆಯ ಉದ್ದೇಶ:**

ಈ ಯೋಜನೆಯು ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್ ಒದಗಿಸುವ ಸದುದ್ಧೇಶವನ್ನು ಹೊಂದಿದೆ.

2. **ಯೋಜನೆಯ ವ್ಯಾಪ್ತಿ ಮತ್ತು ಅರ್ಹತೆ**

ಅ) ಈ ಯೋಜನೆಯ ಲಾಭ ಪಡೆಯುವವರು 18 ರಿಂದ 60 ವರ್ಷ ವಯೋಮಿತಿಯಲ್ಲಿರಬೇಕು.

ಆ) ಈ ಯೋಜನೆಯ ಲಾಭ ಪಡೆಯುವ ಕಾರ್ಮಿಕರು ಕೆಲಸ ಮಾಡುವ ಸಂಸ್ಥೆಯು ಪ್ರತಿ ವರ್ಷ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ, 1965 ರ ಸಕ್ಷನ್ 7 ರಡಿಯಲ್ಲಿ, ಮಂಡಳಿಗೆ ವಂತಿಕೆ ಪಾವತಿಸುತ್ತಿರಬೇಕು.

ಇ) ಈ ಯೋಜನೆಯ ಲಾಭ ಪಡೆಯಲು ಬಯಸುವ ಅಂಗವಿಕಲ ನೌಕರರು, ಈ ಯೋಜನೆಯಡಿ ಈ ಕಛೇರಿ ಸಿದ್ಧಪಡಿಸಿರುವ ಅರ್ಜಿ ನಮೂನೆಯನ್ನು ಈ ಕಛೇರಿಯಿಂದ ಪಡೆದು ಭರ್ತಿ ಮಾಡಿ ಕಲ್ಯಾಣ ಆಯುಕ್ತರಿಗೆ ಸಲ್ಲಿಸಬೇಕು.

ಈ) ಈ ಯೋಜನೆಯ ವಿಷಯದಲ್ಲಿ ಕಲ್ಯಾಣ ಆಯುಕ್ತರ ತೀರ್ಮಾನವೇ ಅಂತಿಮವಾದದ್ದು, ಅನಗತ್ಯ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.

**4. ಕಾರ್ಮಿಕರ ಅಪಘಾತ ಧನಸಹಾಯ ಯೋಜನೆ:**

**ಯೋಜನೆಯ ವ್ಯಾಪ್ತಿ ಮತ್ತು ಅರ್ಹತೆ:**

ಅ) 18 ರಿಂದ 60 ವರ್ಷದೊಳಗಿನ ಕಾರ್ಮಿಕರು ಈ ಯೋಜನೆಗೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅರ್ಹರಾಗುವರು.

ಆ) ಕಾರ್ಮಿಕರು ಕೆಲಸ ಮಾಡುವ ಸಂಸ್ಥೆಯು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ಸಕ್ಷನ್ 74 ರ ಪ್ರಕಾರ ವಂತಿಕೆ ಪಾವತಿಸಿರಬೇಕು.

ಇ) ಈ ಯೋಜನೆಯ ಸಹಾಯ/ಪರಿಹಾರ ಪಡೆಯಲು ಸಂಬಳದ ಮಿತಿಯಿರುವುದಿಲ್ಲ.

ಈ) ಸಹಾಯಧನ ಕನಿಷ್ಠ ರೂ.1000/– ಗರಿಷ್ಠ ರೂ 3000/–ದರವರೆಗಿರುತ್ತದೆ.

ಉ) ಈ ಯೋಜನೆಯ ಅವಶ್ಯಕ ಅರ್ಜಿ ನಮೂನೆಯನ್ನು ಈ ಕಛೇರಿಯಿಂದ ಪಡೆಯತಕ್ಕದ್ದು.

ಊ) ಅವಶ್ಯಕ ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಇತರ ದಾಖಲೆಗಳ ಛಾಯಾ ಪ್ರತಿಗಳನ್ನು ಒದಗಿಸತಕ್ಕದ್ದು.

ಋ) ಪರಿಹಾರ/ಸಹಾಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿಸಲ್ಲಿಸತಕ್ಕದ್ದು.

ಎ) ಅವಧಿ ಮೀರಿ ಬಂದ ಅರ್ಜಿಗಳಿಗೆ ಸಕಾರಣ ನೀಡಿದ್ದ ಪಕ್ಷದಲ್ಲಿ ಅವುಗಳನ್ನು ಪರಿಗಣಿಸುವ ಅಧಿಕಾರ ಮಂಡಳಿಗೆ ಸೇರಿದ್ದು.

ಏ) ಈ ಯೋಜನೆಯನುಸಾರ ಸಿಗುವ ಸೌಲಭ್ಯಗಳ ಬಗ್ಗೆ ಕಲ್ಯಾಣ ಆಯುಕ್ತರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ. ಅನಾವಶ್ಯಕ ಪತ್ರ ವ್ಯವಹಾರಗಳಿಗೆ ಅವಕಾಶವಿಲ್ಲ.

**5. ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀದಿಸಲು ಧನ ಸಹಾಯ ನೀಡುವ ಯೋಜನೆ.**

**1. ಯೋಜನೆಯ ವ್ಯಾಪ್ತಿ ಮತ್ತು ಅರ್ಹತೆ:**

ಅ) ಈ ಯೋಜನೆಯ ಲಾಭ ಪಡೆಯಲು ಕಾರ್ಮಿಕರು 18 ರಿಂದ 60 ವರ್ಷ ವಯೋಮಿತಿಯೊಳಗಿರಬೇಕು.

ಆ) ಈ ಯೋಜನೆಯ ಲಾಭ ಪಡೆಯಲು ಸಂಬಳದ ಮಿತಿಯಿರುವುದಿಲ್ಲ.

ಇ) ಅರ್ಜಿದಾರರು ಇ.ಎಸ್.ಐ. ಕಾರ್ಮಿಕ ನಷ್ಟ ಪರಿಹಾರ ಕಾಯಿದೆ ಅಥವಾ ಬೇರಾವುದೆ ಮೂಲದಿಂದ ಧನ ಸಹಾಯ ಪಡೆದಿರಬಾರದು.

ಈ) ಕೃತಕ ಅಂಗಸಾಧನ ಖರೀದಿಸಲು ಕನಿಷ್ಠ ರೂ.1000/- ಗರಿಷ್ಠ ರೂ.5000/- ಧನ ಸಹಾಯ ನೀಡಲಾಗುವುದು.

ಉ) ಅರ್ಜಿ ನಮೂನೆಯನ್ನು ಕಲ್ಯಾಣ ಆಯುಕ್ತರ ಕಛೇರಿಯಿಂದ ಉಚಿತವಾಗಿ ಪಡೆಯಬಹುದು.

ಊ) ಕಛೇರಿಯಿಂದ ಅರ್ಜಿ ಪಡೆದ ಮೂರು ತಿಂಗಳೊಳಗೆ ವೈದ್ಯಕೀಯ ಮತ್ತು ಇತರ ದಾಖಲೆಗಳೊಂದಿಗೆ ಅರ್ಜಿಸಲ್ಲಿಸತಕ್ಕದ್ದು.

**6. ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ ನೀಡುವ ಯೋಜನೆ**

1. **ಅರ್ಹತೆ:**ಈ ಸೌಲಭ್ಯ ಪಡೆಯುವ ಕಾರ್ಮಿಕರು 18 ರಿಂದ 60 ವರ್ಷ ವಯಸ್ಸಿನೊಳಗಿರಬೇಕು.

2. **ಪಡೆಯುವ ಸೌಲಭ್ಯ:** ನೊಂದಾಯಿತ ಕಾರ್ಮಿಕ ಸಂಘಗಳು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಲ್ಲಿ ರೂ. 20,000/- ರವರೆಗೆ ಧನಸಹಾಯ ನೀಡಲಾಗುವುದು.

**7. ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್ ಸಂಸ್ಥೆಗಳಿಗೆ ಧನಸಹಾಯ ನೀಡುವ ಯೋಜನೆ.**

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮತ್ತು ಕುಟುಂಬ ವರ್ಗದವರಿಗೆ ದೈಹಿಕ ಆರೋಗ್ಯ ತಪಾಸಣೆಯನ್ನು ನಡೆಸುವ ಕಾರ್ಮಿಕ ಸಂಘಟನೆಗಳು (ಟ್ರೇಡ್ ಯೂನಿಯನ್‌ಗಳು) ಎನ್.ಜಿ.ಓ.ಗಳು (*N.G.Os.*) ಮತ್ತು ರೋಟರಿಯನ್ಸ್, ಲಯನ್ಸ್ ಕ್ಲಬ್ ಇತ್ಯಾದಿ ಸಂಘಗಳು ಮುಂದೆ ಬಂದಲ್ಲಿ ಸದರಿ ಯೂನಿಯನ್‌ಗಳು ನಡೆಸುವ ಪ್ರತಿ ಕ್ಯಾಂಪ್‌ಗೆ ಧನಸಹಾಯ ನೀಡುವ ಯೋಜನೆಯನ್ನು ಮಂಡಳಿಯಿಂದ ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಅರ್ಜಿಯನ್ನು 15 ದಿವಸಗಳ ಮುಂಚಿತವಾಗಿ ಸಲ್ಲಿಸತಕ್ಕದ್ದು. ಇಂತಹ ಶಿಬಿರದ ರೂಪು ರೇಶೆಗಳನ್ನು ಹಾಗೂ ಶಿಬಿರದಲ್ಲಿ ಭಾಗವಹಿಸುವ ಕಾರ್ಮಿಕರ ಗರಿಷ್ಠ ಪರಿಮಿತಿ ಹಾಗೂ ನೀಡುವ ಚಿಕಿತ್ಸಾ ಕ್ರಮವನ್ನು ಆಧರಿಸಿ ಗರಿಷ್ಠ ರೂ. 20,000/- ಗಳವರೆಗೆ ಧನಸಹಾಯ ನೀಡಲಾಗುವುದು.

**8. ಹಿಮೋಪಿಲಿಯಾ ನ್ಯೂನತೆಯಿಂದ ಬಳಲುತ್ತಿರುವ ಕಾರ್ಮಿಕರಿಗೆ ಚಿಕಿತ್ಸೆ ನೀಡುವ ಸೊಸೈಟಿಗಳ ಮೂಲಕ ಧನಸಹಾಯ ನೀಡುವ ಯೋಜನೆ.**

ಹಿಮೋಫಿಲಿಯಾ ಎಂಬುದೊಂದು ರಕ್ತದ ನ್ಯೂನತೆ ಆಗಿದ್ದು ಇದು ಗಾಯ/ರಕ್ತ ಸ್ರಾವಗಳಾದ ರಕ್ತ ತನ್ನಿಂದ ತಾನೇ ನೈಸರ್ಗಿಕವಾಗಿ ಹೆಪ್ಪುಗಟ್ಟಿ ರಕ್ತಸೋರಿಕೆ ನಿಲ್ಲುವುದಿಲ್ಲ, ಇಂತಹ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ಸಂಘಗಳು ಬೆಂಗಳೂರು ಮತ್ತು ದಾವಣಗೆರೆಯ ಜೈನ್ ಮತ್ತು ಮಣಿಪಾಲದ ಆಸ್ಪತ್ರೆಯಲ್ಲಿದ್ದು ಈ ಸಂಘಗಳ ಮೂಲಕ ರಾಜ್ಯಾದ್ಯಾಂತ ಇರುವ ಕಾರ್ಮಿಕರು ಚಿಕಿತ್ಸೆ ಪಡೆದಲ್ಲಿ ಮಂಡಳಿಯಿಂದ ಧನ ಸಹಾಯ ಕೋರಿ ಅರ್ಜಿ ಸಲ್ಲಿಸಬಹುದು.

**ಅರ್ಹತೆ:**

| | |
|---|---|
| ಕಾರ್ಮಿಕರು 18 ರಿಂದ 60 ವರ್ಷ ವಯಸ್ಸಿನೊಳಗಿರಬೇಕು. | ಮಾಹೆಯಾನ ರೂ.7500/– ಕಿಂತ ಹೆಚ್ಚಾಗಿರಬಾರದು |
| ಕನಿಷ್ಠ 3 ವರ್ಷಗಳ ವಂತಿಗೆ ಸಂದಾಯ ಮಾಡಿರಬೇಕು | ವೈದ್ಯಕೀಯ ದೃಡೀಕರಣ ನೀಡಬೇಕು. |
| 6 ತಿಂಗಳೊಳಗೆ ಅರ್ಜಿಸಲ್ಲಿಸಬೇಕು. | |

**ಪಡೆಯುವ ಸೌಲಭ್ಯ:**ಈ ನ್ಯೂನತೆಗೆ ಒಳಗಾದ ಕಾರ್ಮಿಕರಿಗೆ ರೂ, 5000/– ಗಳಿಗೆ ಮೀರದಂತೆ ಧನಸಹಾಯವನ್ನು ನೋಂದಾಯಿತ ಹಿಮೋಫಿಲಿಯಾ ಸಂಘಗಳಿಗೆ ನೀಡಲಾಗುವುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:**

ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಕಾರ್ಮಿಕ ಕಲ್ಯಾಣ ಭವನ, ನಂ.48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು–560022

ದೂರವಾಣಿ: 23475188 / 23570266

*e- mail:welfarecom@gmail.com, www.klwb-kar.com*

## ಭಾರತ ಸರ್ಕಾರ ಕಾರ್ಮಿಕ ಮಂತ್ರಾಲಯ ಕಾರ್ಮಿಕ ಕಲ್ಯಾಣ ಸಂಸ್ಥೆ ಬೆಂಗಳೂರು.
## ಬೀಡಿ ಕಾರ್ಮಿಕರ ಕಲ್ಯಾಣ ಯೋಜನೆಗಳ ಪಕ್ಷಿನೋಟ

**ಮುನ್ನುಡಿ**

ಭಾರತ ಸರ್ಕಾರವು ಕಾರ್ಮಿಕ ಕಲ್ಯಾಣ ಸಂಸ್ಥೆಯ ಮೂಲಕ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿಗೋಸ್ಕರ ಕಾರ್ಮಿಕರ ಕಲ್ಯಾಣ ಮಂತ್ರಾಲಯದ ಅಡಿಯಲ್ಲಿ ಭಾರತವನ್ನು 9 ಭಾಗಗಳಾಗಿ ವಿಭಜಿಸಿ ಕರ್ನಾಟಕ, ಕೇರಳ ಮತ್ತು ಲಕ್ಷದ್ವೀಪ ರಾಜ್ಯಗಳಿಗೆ ಬೆಂಗಳೂರು ನಗರದಲ್ಲಿ ಕಛೇರಿಯನ್ನು ತೆರೆದಿದ್ದು ಕಲ್ಯಾಣ ಆಯುಕ್ತರು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಕಾರ್ಮಿಕರ ಕ್ಷೇಮಾಭ್ಯುದಯಕ್ಕೋಸ್ಕರ ಆರ್ಯೋಗ್ಯ ಶೈಕ್ಷಣಿಕ ವಸತಿ ಮತ್ತು ಹಲವು ಸೌಲಭ್ಯಗಳು ಜಾರಿಯಲ್ಲಿವೆ. ಈ ಸೌಲಭ್ಯಗಳ ವಿವರ ಈ ಕೆಳಕಂಡಂತಿವೆ.

1. **ಆರ್ಯೋಗ್ಯ ಸೌಲಭ್ಯಗಳು**

| **ಕಾಯಿಲೆ ಹೆಸರು** | **ಅವಧಿ** | **ಸೌಲಭ್ಯದ ಫಲಾನುಭವಿ** | **ಸಿಗುವ ಹಣ** |
|---|---|---|---|
| ಕ್ಯಾನ್ಸರ್ ರೋಗ: | ಕನಿಷ್ಠ 6ತಿಂಗಳ ಸೇವೆ | ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ. | ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರಗಳಲ್ಲಿ ಚಿಕಿತ್ಸೆ ಪಡೆದಿದ್ದರೆ ಪೂರ್ಣ ಖರ್ಚನ್ನು ಮರುಪಾವತಿ ಮಾಡಲಾಗುವುದು.ಚಿಕಿತ್ಸೆ ಪಡೆಯುವ ಅವದಿಯಲ್ಲಿ ಕಾರ್ಮಿಕರಿಗೆ ಮಾತ್ರ ತಿಂಗಳಿಗೆ ರೂ.600/– ರಿಂದ 750/– ರವರೆಗೆ ಜೀವನ ನಿರ್ವಹಣೆ ಭತ್ಯೆ ಹಾಗೂ ಅಸ್ಪತ್ರೆಗೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ನೀಡಲಾಗುವುದು. |
| ಹೃದ್ರೋಗ: | ಕನಿಷ್ಠ 3 ವರ್ಷಗಳ ಸೇವೆ | ಕಾರ್ಮಿಕರಿಗೆ ಮತ್ತು | ಸರ್ಕಾರದಿಂದ ಮಾನ್ಯತೆ ಅಸ್ಪತ್ರಗಳಲ್ಲಿ ಚಿಕಿತ್ಸ ಪಡೆದಿದ್ದರೆ ಗರಿಷ್ಠ 1,30,000/– ರೂ.ಗಳವರೆಗೆ ಮಾಡಲಾಗುವುದು. ಚಿಕಿತ್ಸೆ ಪಡೆಯುವ ಅವದಿಯಲ್ಲಿ ಕಾರ್ಮಿಕರಿಗೆ ಮಾತ್ರ |

| | | | |
|---|---|---|---|
| | | ಅವಲಂಬಿತರಿಗೆ. | ತಿಮಗಳಿಗೆ ರೂ.750/– ರಿಂದ 1000/–ದವರೆಗೆ ಜೀವನ ನಿರ್ವಹಣೆ ಭತ್ಯೆ ಹಾಗೂ ಅಸ್ಪತ್ರೆಗೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ನೀಡಲಾಗುವುದು. |
| ಮೂತ್ರಪಿಂಡ ಚಿಕಿತ್ಸೆ: | ಕನಿಷ್ಠ 3 ವರ್ಷಗಳ ಸೇವೆ | ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ. | ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರೆ ಗರಿಷ್ಠ2,00.000/–ರೂ. ಗಳವರೆಗೆ ಮರುಪಾವತಿ ಮಾಡಲಾಗುವುದು.ಚಿಕಿತ್ಸೆ ಪಡೆಯುವ ಅವದಿಯಲ್ಲಿ ಕಾರ್ಮಿಕರಿಗೆ ಮಾತ್ರ ತಿಂಗಳಿಗೆ ರೂ.750/–ರಿಂದ1000/–ದವರೆಗೆ ಜೀವನ ನಿರ್ವಹಣೆ ಭತ್ಯೆ ಹಾಗೂ ಆಸ್ಪತ್ರೆಗೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ನೀಡಲಾಗುವುದು. |
| ಹೆರಿಗೆ ಸೌಲಭ್ಯ: | 6 ತಿಂಗಳ ಸೇವೆ | ಮಹಿಳಾ ಕಾರ್ಮಿಕರಿಗೆ ಮಾತ್ರ | ಪ್ರತಿ ಹೆರಿಗೆಗೆ ರೂ1,000/–ದಂತೆ ಮೊದಲ ಎರಡು ಹೆರಿಗೆಗಳಿಗೆ ಆರ್ಥಿಕ ನೆರವು ನೀಡಲಾಗುವುದು. |
| ಕುಟುಂಬ ಯೋಜನೆ : | 6 ತಿಂಗಳ ಸೇವೆ | ಗಂಡ ಅಥವಾ ಹೆಂಡತಿ | ಎರಡು ಅಥವಾ ಕಡಿಮೆ ಮಕ್ಕಳು ಇರುವ ಕಾರ್ಮಿಕರಿಗೆ ಗಂಡ ಅಥವಾ ಹೆಂಡತಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಲ್ಲಿ ರೂ500/–ಪ್ರೋತ್ಸಾಹಧನ ಕಾರ್ಮಿಕರಿಗೆ ನೀಡಲಾಗುವುದು. |
| ಕ್ಷಯ ರೋಗ: | ಕನಿಷ್ಠ 6 ವರ್ಷ | ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ. | ಸರ್ಕಾರಿ ಕ್ಷಯ ರೋಗ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ.ಔಷದಿ ಖರೀದಿಗಾಗಿ ತಿಂಗಳಿಗೆ ರೂ50/–ನೀಡಲಾಗುವುದು.ಚಿಕಿತ್ಸೆ ಪಡೆಯುವ ಅವಧಿಯಲ್ಲಿ ಕಾರ್ಮಿಕರಿಗೆ ಮಾತ್ರ ತಿಂಗಳಿಗೆ ರೂ600/–ರಿಂದ750/– ರವರೆಗೆ ಜೀವನ ನಿರ್ವಹಣೆ ಭತ್ಯೆ ನೀಡಲಾಗುವುದು. |
| ಕುಷ್ಠ ರೋಗ | ಕನಿಷ್ಠ 6 ವರ್ಷ | ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ. | ಕುಷ್ಠ ರೋಗ ನಿಯಂತ್ರಣ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು.ಚಿಕಿತ್ಸೆ ಪಡೆಯುವ ಆವದಿಯಲ್ಲಿ ಕಾರ್ಮಿಕರಿಗೆ ಮಾತ್ರ ತಿಂಗಳಿಗೆ ರೂ200/– ರಿಂದ300/– ರವರೆಗೆ ಜೀವನ ನಿರ್ವಹಣೆ ಭತ್ಯೆ ನೀಡಲಾಗುವುದು. |
| ಮಾನಸಿಕ ರೋಗ : | ಕನಿಷ್ಠ 6 ವರ್ಷ | ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ | ಸರ್ಕಾರಿ ಮಾನಸಿಕ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಚಿಕಿತ್ಸೆ ಪಡೆಯುವ ಅವಧಿಯಲ್ಲಿ ಕಾರ್ಮಿಕರಿಗೆ ಮಾತ್ರ ತಿಂಗಳಿಗೆ ರೂ600/–ರಿಂದ750/– ರವರೆಗೆ ಜೀವನ ನಿರ್ವಹಣೆ ಭತ್ಯೆ ನೀಡಲಾಗುವುದು |
| ಕನ್ನಡಕ ಖರೀದಿಸಲು | | ಕಾರ್ಮಿಕರಿಗೆ | ಕನ್ನಡಕ ಖರೀದಿಸಲು ರೂ300/–ರವರೆಗೆ ಮರುಪಾವತಿ ಮಾಡಲಾಗುವದು.ಲೆನ್ಸ್‌ಗಳನ್ನು ಬದಲಾಯಿಸಿದರೆ ರೂ20/– |

| | | | |
|---|---|---|---|
| | | | ರವರೆಗೆ ಮರುಪಾವತಿ ಮಾಡಲಾಗುವುದು. |
| ಹರ್ನಿಯಾ/ಅಪೆಂಡೆಕ್ಟ ಮಿ/ ಅಲ್ಸರ್ / ಗೈನಾಕಾಲಾಜಿಕಲ್/ ಪ್ರೋಸ್ಟ್ರೇಟ್ | ಕನಿಷ್ಠ 6 ವರ್ಷ | ಕಾರ್ಮಿಕರಿಗೆ ಮಾತ್ರ. | ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆದಿದ್ದರೆ ಗರಿಷ್ಠ ರೂ.30,000/- ಗಳವರೆಗೆ ಮರುಪಾವತಿ ಮಾಡಲಾಗುವುದು |

**2. ಸಾಮಾಜಿಕ ಭದ್ರತಾ ಸೌಲಭ್ಯ ಮತ್ತು ಸಾಮೂಹಿಕ ವಿಮಾ ಯೋಜನೆ:**

ಕಾರ್ಮಿಕರಿಗೆ ಭವಿಷ್ಯ ನಿಧಿಗೆ ಸದಸ್ಯರಲ್ಲದ ಮತ್ತು 18 ರಿಂದ 60 ವರ್ಷದೊಳಗೆ ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ ಹೊಂದಿದ್ದರೆ ಈಕೆಳಕಂಡಂತೆ ವಿಮಾಮೊತ್ತವನ್ನು ಪಡೆಯಲು ಅರ್ಹರು.

1. ಸಹಜ ಮರಣಕ್ಕೆ .................ರೂ.10,000/-(ಅವಲಬಿಂತರಿಗೆ)
2. ಅಪಘಾತ ಮರಣಕ್ಕೆ .................ರೂ.25,000/-(ಅವಲಬಿಂತರಿಗೆ)
3. ಭಾಗಶಃ ವಿಕಲಾಂಗತೆ .................ರೂ.12,500/-(ಕಾರ್ಮಿಕರಿಗೆ)
4. ಶಾಶ್ವತ ವಿಕಲಾಂಗತೆ .................ರೂ.25,000/-(ಕಾರ್ಮಿಕರಿಗೆ)

**3. ಶೈಕ್ಷಣಿಕ ಸೌಲಭ್ಯಗಳು**

ಕನಿಷ್ಠ 6 ತಿಂಗಳು ಸೇವೆ ಸಲ್ಲಿಸಿದ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡತೆ ವಾರ್ಷಿಕ ಧನ ಸಹಾಯ ನೀಡಲಾಗುವುದು

| ಕ್ರ.ಸಂ | ತರಗತಿ | ವಿದ್ಯಾರ್ಥಿಗೆ ಸಿಗುವ ಧನಸಹಾಯ | ವಿದ್ಯಾರ್ಥಿನಿಗೆ ಸಿಗುವ ಧನಸಹಾಯ |
|---|---|---|---|
| 1 | 1 ರಿಂದ 4ನೇ ತರಗತಿ | 250/- | 250/- |
| | 5 ರಿಂದ 8ನೇ ತರಗತಿ | 500/- | 940/- |
| | 9ನೇ ತರಗತಿ | 700/- | 1,140/- |
| | 10ನೇ ತರಗತಿ | 1,400/- | 1,840/- |
| | 11&12ನೇ ತರಗತಿ | 2,000/- | 2,440/- |
| | 3 ವರ್ಷದ ತಾಂತ್ರಿಕ/ ಪದವಿ ಸ್ನಾತಕೋತ್ತರ | 3,000/- | 3,000/- |
| | ವೃತ್ತಿಪರ | 15,000/- | 15,000/- |

**4. ವಸತಿ ಸೌಲಭ್ಯಗಳು**

**ಸ್ವಂತ ಮನೆ ಕಟ್ಟಲು ಸಹಾಯ ಧನ (ಸಬ್ಸಿಡಿ):**

1) ಹೊಸ ಮನೆ ಕಟ್ಟಲು ರೂ. 40,000 ದವರೆಗೆ ಹಂತಗಳಲ್ಲಿ ಆರ್ಥಿಕ ನೆರವು ನೀಡಲಾಗುವುದು.
2) ಸ್ವಂತ ಮನೆ ಹೊಂದಿರಬಾರದು.
3) ಸ್ವಂತ ಜಾಗ ಹೊಂದಿರಭೇಕು ಅಥವಾ ಕುಟುಂಬದ ಸದಸ್ಯರ ಹೆಸರಿನಲ್ಲಿದ್ದರೆ ಆವರಿಂದ ಅನುಮತಿ ಪತ್ರ ಅಗತ್ಯ.
4) ಮನೆ ಕಟ್ಟುವ ಅಂದಾಜು ಖರ್ಚು ಮತ್ತು ನಿವೇಶನದ ಒಟ್ಟು ಬೆಲೆ ರೂ.1,00.000/-ಕ್ಕಿಂತ ಮೀರಿರಬಾರದು.
5) ನಿವೇಶನದ ಆಳತೆ ಕನಿಷ್ಠ 60 ಚ.ಗಜ ಇರಬೇಕು.ನಿವೇಶನದ ಆಳತೆ ಕಡಿಮೆ ಇದ್ದಲ್ಲಿ ಕಟ್ಟುವ ಮನೆಯ ವಿಸ್ತೀರ್ಣ ಕನಿಷ್ಠ 20 ಚ.ಮೀಟರ್ ಇರತಕ್ಕದ್ದು.

**ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳ ವಿವರ:**

1) ನಿಗದಿತ ಅರ್ಜಿಯಲ್ಲಿ ಎಲ್ಲಾ ರೀತಿಯಿಂದಲೂ ಸಂಪೂರ್ಣವಾಗಿ ಭರ್ತಿಮಾಡಿ ಸಹಿಯೊಂದಿಗೆ ಸಲ್ಲಿಸತಕ್ಕದ್ದು.
2) ಗುರುತಿನ ಚೀಟಿ ಅಥವಾ ಭವಿಷ್ಯನಿಧಿ ಖಾತೆಯ ನಕಲು ಪ್ರತಿಗಳನ್ನು ಬೀಡಿ ಕಂಪನಿಯ ಮಾಲೀಕರಿಂದ ಮೇಲುಸಹಿ ಪಡೆದು ಲಗತ್ತಿಸತಕ್ಕದ್ದು.
3) ನಿವೇಶನದ ವರ್ಗಾವಣೆ ಪತ್ರ/ ಪಟ್ಟಾ/ ಖಾತೆ/ ಆರ್.ಟಿ ಸಿ.ಇದರ ನಕಲು ಪ್ರತಿಯನ್ನು ಮುದ್ರೆ ಪಡೆದು ಲಗತ್ತಿಸಬೇಕು
4) ಉಪನೋಂದಣಾದಿಕಾರಿಯವರು ನೀಡಿದ ನಿವೇಶನದ ಋಣಬಾರ ರಹಿತ ಪ್ರಮಾಣ ಪತ್ರದ ನಕಲನ್ನು (ದೃಡೀಕರಿಸಿ) ಲಗತ್ತಿಸಬೇಕು
5) ನಿವೇಶನದ ನಕ್ಷೆಯ ಮೇಲೆ ಕಾರ್ಮಿಕ ಹಾಗೂ ಸಂಬಂದಪಟ್ಟ ಅದಿಕಾರಿಗಳಿಂದ ಸಹಿ ಮತ್ತು ಮುದ್ರೆ ಪಡೆದು ಲಗತ್ತಿಸಬೇಕು
6) ಅನುಮತಿ ಪಡೆದ ಮನೆಯ ನಕ್ಷೆಮೇಲೆ ಮತ್ತು ಅಂದಾಜು ವೆಚ್ಚದ ಪಟ್ಟಿಯಲ್ಲಿ ಕಾರ್ಮಿಕರ ಸಹಿ ಮಾಡಿ ಅದನ್ನು ಅಭಿಯಂತರರ ಸಹಿ ಮತ್ತು ಮುದ್ರೆ ಪಡೆದು ಲಗತ್ತಿಸಬೇಕು
7) ಪಂಚಾಯಿತಿ/ ತಾಲೂಕು ಕಛೇರಿ ನಿಗದಿತ ಅದಿಕಾರಿಗಳಿಂದ ಪಡೆದ ಉದ್ದೇಶಿತ ಮನೆಯ ನಕ್ಷೆ ಮತ್ತು ಅನುಮತಿ ಪತ್ರದ ನಕಲನ್ನು(ದೃಡೀಕರಿಸಿ) ಲಗತ್ತಿಸಬೇಕು
8) ನಿವೇಶನವು ಕಾರ್ಮಿಕನ ಹೆಸರಿನಲ್ಲಿ ಇಲ್ಲದೆ ಕುಟುಂಬದ ಸದಸ್ಯರ ಹೆಸರಿನಲ್ಲಿದ್ದರೆ ಆವರಿಂದ ಆನುಮತಿ ಪತ್ರ ಪಡೆದು ಅದನ್ನು ಲಗತ್ತಿಸಬೇಕು
9) ಕಾರ್ಮಿಕನ /ದಂಪತಿಗಳ ಇತ್ತಿಚಿನ ಎರಡು ಭಾವಚಿತ್ರಗಳನ್ನು ಗೆಜೆಟೆಡ್ ಅದಿಕಾರಿಯಿಂದ(ದೃಡೀಕರಿಸಿ) ಲಗತ್ತಿಸಬೇಕು.

**ಮನೆ ದುರಸ್ತಿಗಾಗಿ/ ಮಾರ್ಪಾಡಿಗೋಸ್ಕರ ಧನ ಸಹಾಯ:**

ಮನೆ ಕಟ್ಟಿದ 15 ವರ್ಷಗಳ ನಂತರ ಮನೆಯ ದುರಸ್ತಿಗಾಗಿ ಅಥವಾ ಮಾರ್ಪಾಡಿಗಾಗಿ ಒಂದು ಬಾರಿ ಮಾತ್ರ ರೂ.5000/-ಗಳವರೆಗೆ ಸಹಾಯ ಧನವನ್ನು ನೀಡಲಾಗುವುದು.

**ಸೂಚನೆ:**

1) ಈ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಕಾರ್ಮಿಕರು ಗುರುತಿನ ಚೀಟಿಯನ್ನು ಪಡೆದಿರಬೇಕು ಮತ್ತು ಮಾಸಿಕ ಆದಾಯ ರು.10000/-ಕ್ಕಿಂತ ಮೀರಿರಬಾರದು
2) ವಸತಿ ಸೌಲಭ್ಯಗಳನ್ನು ಪಡೆಯಲು ಮಾಸಿಕ ಅದಾಯ 3500/-ಕ್ಕಿಂತ ಮೀರಿರಬಾರದು.

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ವಿಳಾಸದಲ್ಲಿ ವಿಚಾರಿಸಬಹುದು**

ಕಲ್ಯಾಣ ಆಯುಕ್ತರವರ ಕಛೇರಿಕಾರ್ಮಿಕ ಕಲ್ಯಾಣ ಸಂಸ್ಥೆ, ಕಲ್ಯಾಣ ಸದನ, 3ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, 2ನೇ ಹಂತ, ಯಶವಂತಪುರ, ಇಂಡಸ್ಟ್ರೀಯಲ್ ಸಬರನ್, ಬೆಂಗಳೂರು–560022.

ದೂರವಾಣಿ ಸಂಖ್ಯೆ:080–23471406, 23477491, 09481131956.

**ಭಾರತ ಸರ್ಕಾರ ಶ್ರಮ ಮಂತ್ರಾಲಯ ಕಾರ್ಮಿಕ ಕಲ್ಯಾಣ ಸಂಸ್ಥೆ ಬೆಂಗಳೂರು.**

**ಸಿನಿಮಾ ಕಾರ್ಮಿಕರ ಕಲ್ಯಾಣ ಯೋಜನೆಗಳ ಪಕ್ಷಿನೋಟ**

**ಮುನ್ನುಡಿ**

ಭಾರತದಲ್ಲಿ ಲಕ್ಷಾಂತರ ಜನ ಅಸಂಘಟಿತ ಸಿನಿಮಾ ಕಾರ್ಮಿಕರಿದ್ದು ಅವರ ಜೀವನ ಮಟ್ಟ ಬಹಳ ಹೀನ ಸ್ಥಿತಿಯಲ್ಲಿದೆ. ಭಾರತ ಸರ್ಕಾರವು ಕಾರ್ಮಿಕ ಕಲ್ಯಾಣ ಸಂಸ್ಥೆಯ ಮೂಲಕ ಸಿನಿಮಾ ಕಾರ್ಮಿಕರ ಕ್ಷೇಮಾಭಿವೃದ್ಧಿಗೋಸ್ಕರ ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಕಾರ್ಮಿಕ ಮಂತ್ರಾಲಯದ ಅಡಿಯಲ್ಲಿ ಭಾರತವನ್ನು 9 ಭಾಗಗಳಾಗಿ ವಿಭಜಿಸಿ ಕರ್ನಾಟಕ, ಕೇರಳ ಮತ್ತು ಲಕ್ಷ ದ್ವೀಪ ರಾಜ್ಯಗಳಿಗೆ ಬೆಂಗಳೂರು ನಗರದಲ್ಲಿ ಕಛೇರಿಯನ್ನು ತೆರೆದಿದ್ದು ಕಲ್ಯಾಣ ಆಯುಕ್ತರು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದಾರೆ. ಕಾರ್ಮಿಕರ ಕ್ಷೇಮಾಭ್ಯುದಯಕ್ಕೋಸ್ಕರ ಹಲವಾರು ಸೌಲಭ್ಯಗಳನ್ನು ಹಳ್ಳಿಯಿಂದ ಜಿಲ್ಲಾ ಮಟ್ಟದಲ್ಲಿರುವ ಎಲ್ಲಾ ಸಿನಿಮಾ ಕಾರ್ಮಿಕರಿಗೋಸ್ಕರ ವ್ಯಾಪಕವಾಗಿ ವೈದ್ಯಕೀಯ ಶಿಕ್ಷಣ ಮತ್ತು ಹಲವು ಯೋಜನೆಗಳು ಜಾರಿಯಲ್ಲಿವೆ. ಈ ಯೋಜನೆಗಳ ವಿವರಣೆ ಮತ್ತು ಪರಿಚಯವನ್ನು ಈ ಮೂಲಕ ತಿಳಿಯಪಡಿಸಲು ಹರ್ಷಿಸುತ್ತೇವೆ.

ಕಾರ್ಮಿಕರ ಕ್ಷೇಮಾಭಿವೃದ್ಧಿ ದೇಶದ ಅಭಿವೃದ್ಧಿ ಭಾರತ ಘನ ಸರ್ಕಾರವು ಕಾರ್ಮಿಕ ಕಲ್ಯಾಣದ ಮೂಲಕ ಸಿನಿಮಾ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಈ ಕೆಳಕಂಡ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ.

| | |
|---|---|
| ಸ್ವಾಸ್ಥ್ಯ ಯೋಜನೆಗಳು | ಸಂಸ್ಥೆಯು ನಡೆಸುತ್ತಿರುವ ಆಸ್ಪತ್ರೆ ಹಾಗೂ ಔಷಧಾಲಯಗಳಲ್ಲಿ ಸಿನಿಮಾ ಕಾರ್ಮಿಕರಿಗೆ ಮತ್ತು ಅವರನ್ನು ಅವಲಂಬಿಸಿರುವರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು.ಸಂಸ್ಥೆಯು ನಡೆಸುತ್ತಿರುವ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳ ಸ್ಥಳಗಳ ವಿವರಣೆಯನ್ನು ಲಗತ್ತಿಸಲಾಗಿದೆ. |
| ಅರ್ಬುದ ರೋಗ ಅಥವಾ ಕ್ಯಾನ್ಸರ್: | ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರೆ ಚಿಕಿತ್ಸೆಗಾಗಿ ತಗಲುವ ಖರ್ಚನ್ನು ಮರುಪಾವತಿ ಮಾಡಲಾಗುವುದು. ಚಿಕಿತ್ಸೆ ಪಡೆಯುವ ಅವಧಿಯಲ್ಲಿ ನಿರ್ವಹಣೆಗಾಗಿ ಮಾಹೆಯಾನ ರೂ.750/– ರೈಲ್ವೆ ಚಾರ್ಜು ಮತ್ತು ದಿನವಹಿ ಭತ್ಯೆ ನೀಡಲಾಗುವುದು. ಇದರ ಸೌಲಭ್ಯ ಪಡೆಯಲು ಕನಿಷ್ಠ 3 ವರ್ಷಗಳ ಕಾಲ ಕೆಲಸ ನಿರ್ವಹಿಸಿರಬೇಕು ಮತ್ತು ಪಡೆಯುವ ಮೊದಲು ಕಲ್ಯಾಣ ಆಯುಕ್ತರಿಂದ ಪೂರ್ವಾನುಮತಿ ಪಡೆಯತಕ್ಕದ್ದು. |
| ಹೃದ್ರೋಗ : | ಹೃದ್ರೋಗಗಳಿಗೆ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೊಳಗಾದರೆ ಚಿಕಿತ್ಸೆಗಾಗಿ ತಗಲುವ ಖರ್ಚಿನ ಅರ್ದಾಂಶ ಗರಿಷ್ಠ 1 ಲಕ್ಷ ರೂ.ಗಳವರೆಗೆ ಹಾಗೂ ಜೀವನ ನಿರ್ವಹಣೆಗಾಗಿ ಮಾಹೆಯಾನ ರೂ.750/– 9 ತಿಂಗಳುಗಳಿಗೆ ಹಾಗೂ ರೈಲ್ವೆ ಚಾರ್ಜನ್ನು ನೀಡಲಾಗುವುದು. ಇದರ ಸೌಲಭ್ಯ ಪಡೆಯಲು ಆಸ್ಪತ್ರೆಗಳಲ್ಲಿ 3 ವರ್ಷಗಳ ಕಾಲ ಕೆಲಸ ನಿರ್ವಹಿಸರಬೇಕು. ಚಿಕಿತ್ಸೆ ಪಡೆಯುವ ಮೊದಲು ಕಲ್ಯಾಣ ಆಯುಕ್ತರಿಂದ ಪೊರ್ವಾಅನುಮತಿ ಪಡೆಯತಕ್ಕದ್ದು. |
| ಮೂತ್ರಕೋಶದ ಜೋಡಣೆ | ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೊಳಗಾದರೆ ಚಿಕಿತ್ಸೆಗಾಗಿ ತಗಲುವ ಖರ್ಚಿನ ಅರ್ಧಾಂಶ ಗರಿಷ್ಠ 1 ಲಕ್ಷ ರೂ.ಗಳವರೆಗೆ ಹಾಗೂ ಜೀವನ ನಿರ್ವಹಣೆಗಾಗಿ ಮಾಹೆಯಾನ ರೂ.750/ ಮತ್ತು 9 ತಿಂಗಳವರೆಗೂ ರೈಲ್ವೆ ಚಾರ್ಜನ್ನು ನೀಡಲಾಗುವುದು. |

| | | | |
|---|---|---|---|
| ಪ್ರಸೂತಿ ಚಿಕಿತ್ಸೆಗಾಗಿ ಸಹಾಯ | ಮಹಿಳಾ ಕಾರ್ಮಿಕರಿಗೆ ಮಗುವಿನ ಜನನದ ನಂತರ ರೂ. 500 /–ನ್ನು ನೀಡಲಾಗುವುದು. ಈ ಸಹಾಯವನ್ನು ಎರಡು ಮಕ್ಕಳಿಗೆ ಮಾತ್ರ ಮೀಸಲಾಗಿದೆ. | | |
| ಕುಟುಂಬ ಯೋಜನೆ: | ಎರಡು ಅಥವಾ ಕಡಿಮೆ ಮಕ್ಕಳು ಇರುವ ಮಹಿಳಾ ಕಾಮಿಕರು ಕುಟುಂಬ ಯೋಜನೆಯ ಶಸ್ತ್ರ ಚಿಕಿತ್ಸೆಗೆ ಒಳಪಟ್ಟರೆ ರೂ.200/– ನ್ನು ಪ್ರೋತ್ಸಾಹ ಧನವಾಗಿ ನೀಡಲಾಗುವುದು | | |
| ಸಾಮೂಹಿಕ ವಿಮಾ ಯೋಜನೆ: | ಕಾರ್ಮಿಕ ಭವಿಷ್ಯ ನಿಧಿಗೆ ಸದಸ್ಯರಲ್ಲದ ಮತ್ತು 18 ವರ್ಷದಿಂದ 60 ವರ್ಷದ ಒಳಗಿನ ಕಾರ್ಮಿಕರು ಗುರುತಿನ ಚೀಟಿ ಹೊಂದಿದ್ದರೆ ಈ ಯೋಜನೆಯ ಪ್ರಯೋಜನ ಪಡೆಯಲು ಆರ್ಹರು. ವಿಮಾ ಮೊತ್ತವನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ. | | |
| | ಸಹಜ ಮರಣಕ್ಕೆ | 5,000/– ರೂ.ಗಳು | (ಅವಲಂಬಿತರಿಗೆ) |
| | ಅಪಘಾತ ಮರಣಕ್ಕೆ | 10,000/– ರೂ,ಗಳು | (ಅವಲಂಬಿತರಿಗೆ) |

1) **ಶಿಕ್ಷಣ ಯೋಜನೆಗಳು:**

**ಎ) ಕಾರ್ಮಿಕರ ಮಕ್ಕಳಿಗೆ ವಾರ್ಷಿಕ ವಿದ್ಯಾರ್ಥಿ ವೇತನ ಈ ಕೆಳಕಂಡಂತೆ ನೀಡಲಾಗುತ್ತದೆ.**

| | |
|---|---|
| 5 ರಿಂದ 6ನೇ ತರಗತಿ | 400/–ರೂ.ಗಳು |
| 7 ರಿಂದ 10ನೇ ತರಗತಿ | 700/–ರೂ.ಗಳು |
| ಪದವಿಪೂರ್ವ/ಟಿಸಿಚ್/ಇತರೆ | 1,000/–ರೂ.ಗಳು |
| ಪದವಿ/ಪದೋನ್ನತ/ತಾಂತ್ರಿಕ | 1,500/–ರೂ.ಗಳು |
| ವೃತ್ತಿಪರ ಶಿಕ್ಷಣ | 15,000/–ರೂ.ಗಳು |
| ಶಾಲೆ ಮತ್ತು ಕಾಲೇಜಿಗೆ ಹೋಗುವ ಹೆಣ್ಣು ಮಕ್ಕಳಿಗೆ ಹಾಜರಾತಿ ಪ್ರೋತ್ಸಾಹ ಧನ | 5ನೇ ತರಗತಿ ಮತ್ತು ನಂತರದ ತರಗತಿಯಲ್ಲಿ ಕಲಿಯುತ್ತಿದ್ದರೆ ಪ್ರತಿ ಹಾಜರಾತಿಗೆ ರೂ. 2/–ರಂತೆ ವಾರ್ಷಿಕ ಗರಿಷ್ಠ 440/– ರೂ. ಪ್ರೋತ್ಸಾಹ ಧನವಾಗಿ ನೀಡಲಾಗುವುದು. |

ಈ ಯೋಜನೆಯಡಿ ಪ್ರಯೋಜನೆಯಡಿ ಪಡೆಯಲು ಕಾರ್ಮಿಕರು ಕನಿಷ್ಠ 5 ಚಲನಚಿತ್ರಗಳಲ್ಲಿ ಕೆಲಸ ಮಾಡಿರಬೇಕು. ಪ್ರತಿ ಚಲನಚಿತ್ರಕ್ಕೆ ಮಾಸಿಕ ಆದಾಯ ಗರಿಷ್ಠ ರೂ.8000/– ಅಥವಾ ಒಟ್ಟು ಮೊತ್ತ 1 ಲಕ್ಷ ರೂ.ಗಿಂತ ಹೆಚ್ಚಿರಬಾರದು.

| **ಕಾರ್ಮಿಕರ ಕಲ್ಯಾಣ ಸಂಸ್ಥೆ ಭಾರತ ಸರ್ಕಾರ,ಶ್ರಮ ಮಂತ್ರಾಲಯದ ವತಿಯಿಂದ ನಡೆಸುತ್ತಿರುವ ಆಸ್ಪತ್ರೆ ಮತ್ತು ಚಿಕಿತ್ಸಾಲಯದ ವಿವರ.** | | | |
|---|---|---|---|
| ಕ್ರ.ಸಂಖ್ಯೆ | ಆಸ್ಪತ್ರೆ ವಿಳಾಸ | ಕ್ರ.ಸಂಖ್ಯೆ | ಆಸ್ಪತ್ರೆ ವಿಳಾಸ |
| 1. | ಕೇಂದ್ರ ಆಸ್ಪತ್ರೆ , ಕಾರಿಗನೂರು | 2. | ಸಂಚಾರಿ ಚಿಕಿತ್ಸಾಲಯ, ಕಾರಿಗನೂರು |
| 3. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಬಳ್ಳಾರಿ | 4. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಸಂಡೂರು |
| 5. | ಕೇಂದ್ರ ಆಸ್ಪತ್ರೆ ,ಮೈಸೂರು | 6. | ಸಂಚಾರಿ ಚಿಕಿತ್ಸಾಲಯ, ಮೈಸೂರು |
| 7. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಬೆಂಗಳೂರು | 8. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ತುಮಕೂರು |
| 9. | ಸಂಚಾರಿ ಚಿಕಿತ್ಸಾಲಯ, ಪಡೀಲ್ | 10. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ,ತುಂಬೆ |
| 11. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, | 12. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಕಾಟಿಪಾಳ್ಯ |

| | | | |
|---|---|---|---|
| | ಮೂಡಬಿದ್ರಿ | | |
| 13. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ದೇರಳಕಟ್ಟೆ | 14. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಪುತ್ತೂರು |
| 15. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ನಿಪಾಣಿ | 16. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಹರಿಹರ |
| 17. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಕೋಲಾರ | 18. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ವಾಮದಪಾಡವು. |
| 19. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಉಡುಪಿ | 20. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಕಾರ್ಕಳ |
| 21. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಉಪ್ಪಿನಂಗಡಿ | 22. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಹಳೆ ಅಂಗಡಿ |
| 23. | ಸ್ಥಿರ ಮತ್ತು ಸಂಚಾರಿ ಚಿಕಿತ್ಸಾಲಯ, ಕಲ್ಲಡ್ಕ | 24. | ಸ್ಥಿರ ಚಿಕಿತ್ಸಾಲಯ, ಸಿರ |
| 25. | ಸ್ಥಿರ ಚಿಕಿತ್ಸಾಲಯ, ಗುಂಡ್ಲುಪೇಟೆ | 26. | ಸ್ಥಿರ ಚಿಕಿತ್ಸಾಲಯ, ಚೆನ್ನಪಟ್ಟಣ |
| 27. | ಸ್ಥಿರ ಚಿಕಿತ್ಸಾಲಯ, ಚಾಮರಾಜನಗರ | 28. | ಸ್ಥಿರ ಚಿಕಿತ್ಸಾಲಯ, ಕೈಕಂಬ |
| 29. | ಸ್ಥಿರ ಚಿಕಿತ್ಸಾಲಯ, ಹುಬ್ಬಳ್ಳಿ | 30. | ಸ್ಥಿರ ಚಿಕಿತ್ಸಾಲಯ, ಯಾದಗಿರಿ |
| 31. | ಸ್ಥಿರ ಚಿಕಿತ್ಸಾಲಯ, ಧಾರವಾಡ | | |

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ವಿಳಾಸದಲ್ಲಿ ವಿಚಾರಿಸಬಹುದು**

ಕಲ್ಯಾಣ ಆಯುಕ್ತರವರ ಕಛೇರಿ

ಕಾರ್ಮಿಕ ಕಲ್ಯಾಣ ಸಂಸ್ಥೆ, ಕಲ್ಯಾಣ ಸದನ, 3ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, 2ನೇ ಹಂತ, ಯಶವಂತಪುರ, ಇಂಡಸ್ಟ್ರೀಯಲ್ ಸಬರನ್, ಬೆಂಗಳೂರು–560022.

ದೂರವಾಣಿ ಸಂಖ್ಯೆ:080–23471406, 23477491, 09481131956.

| **ರಾಜ್ಯ ಮಟ್ಟದ ಕಾರ್ಮಿಕ ಇಲಾಖೆಗಳ ಸಂಪರ್ಕ ವಿವರ** |
|---|
| **ಸಚಿವರ ಕಚೇರಿ:**<br>ಶ್ರೀ ಪಿ.ಟಿ ಪರಾಮೇಶ್ವರ ನಾಯ್ಕ್, ಕಾರ್ಮಿಕ ಸಚಿವರು,<br>ಕೊಠಡಿ ಸಂಖ್ಯೆ, 237, 2ನೇ ಮಹಡಿ, ವಿಧಾನಸೌಧ, ಬೆಂಗಳೂರು–01, ಪೋನ್ ನಂಬರ್: 080–22258583 |
| **ಅಪರ ಮುಖ್ಯ ಕಾರ್ಯದರ್ಶಿಗಳ ಕಚೇರಿ**<br>ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ–414, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು–01,ಪೋನ್ ನಂಬರ್ :080–22254894, 22035004, ಇ–*Mail:prs-fcs@karnataka.gov.in* |
| ರಾಜ್ಯ ಸಂಪರ್ಕ ಕಚೇರಿಯ ವಿಳಾಸ<br>ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು –560029<br>ದೂರವಾಣಿ: 080–26531252, 26531253, 26531254,ಇ – ಮೇಲ್ : **lco@kar.nic.in**<br>ವೆಬ್ ಸೈಟ್: **www.labour.kar.nic.in** |
| **ಜಂಟಿ ಕಾರ್ಯದರ್ಶಿಗಳು**<br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತ ಕಲ್ಯಾಣ ಮಂಡಳಿ**<br>**ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು –560029**<br>**ದೂರವಾಣಿ ಸಂಖ್ಯೆ:080–26631583**<br>**ವೆಬ್ ಸೈಟ್: www. karlabour.in** |

ಮಾಹಿತಿ ಹಕ್ಕು ಕಾಯ್ದೆ ಎಂದರೆ:–

ಮಾಹಿತಿ ಹಕ್ಕು ಕಾಯ್ದೆಯು 2005ರಲ್ಲಿ ಜಾರಿ ಬಂದಿದ್ದು, ಸರ್ಕಾರಿ ಮತ್ತು ಸರ್ಕಾರಿ ಅನುಧಾನಿತ ಯಾವುದೇ ಇಲಾಖೆಗಳ ಬಗ್ಗೆ ಮಾಹಿತಿಯನ್ನು ಪಡೆಯಲು, ಮನವಿ ಪತ್ರ ಸಲ್ಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ, ಇಲಾಖೆಗಳಲ್ಲಿರುವ ಯಾವುದೇ ರೀತಿ ದಾಖಲೆಗಲನ್ನು ಪಡೆಯಲು ಮಾಹಿತಿ ಹಕ್ಕು ಕಾಯ್ದೆಯನ್ನು ಉಪಯೋಗಿಸಬಹುದು.

**ಮಂಡಳಿಯ ಅಥವಾ ಇತರೆ ಯೋಜನೆಗಳ ಮಾಹಿತಿ ತಿಳಿಯಲು ಮಾಹಿತಿ ಹಕ್ಕು ಕಾಯಿದೆಯ ಅರ್ಜಿ:**

**ಮಾಹಿತಿ ಹಕ್ಕು ಅಧಿನಿಯಮ 2005 ರ ಅಡಿಯಲ್ಲಿ ಅರ್ಜಿ**

ಗೆ,

ಸಾರ್ವಜನಿಕ ಮಾಹಿತಿ ಅಧಿಕಾರಿ

________________________________________

________________________________________

| | |
|---|---|
| ಅರ್ಜಿದಾರರ ಪೂರ್ಣ ಹೆಸರು | |
| ಅರ್ಜಿದಾರರ ಪೂರ್ಣ ವಿಳಾಸ | |
| ವಿಷಯ | |
| ಬೇಕಾದ ಮಾಹಿತಿ | ದೃಢೀಕರಿಸಿದ ಪ್ರತಿಗಳು:– |
| ಮಾಹಿತಿ ಸಂಬಂದಿಸಿದ ವರ್ಷ | |
| ಅರ್ಜಿ ಶುಲ್ಕ ಪಾವತಿ ಮಾಡಿರುವ ವಿವರ | |

ಸ್ಥಳ:

ದಿನಾಂಕ: ಅರ್ಜಿದಾರನ ಸಹಿ

ಮಾಹಿತಿ ಹಕ್ಕು ಅಧಿನಿಯಮ 2005 ರ ಅಡಿಯಲ್ಲಿ ಪ್ರಥಮ ಮೇಲ್ಮನವಿ ಅರ್ಜಿ

| | |
|---|---|
| ಪ್ರಥಮ ಮೇಲ್ಮನವಿ ಅಧಿಕಾರಿ<br>ವಿಳಾಸ-------------------------------<br>----------------------------<br>------------------ | |
| ಅರ್ಜಿದಾರರ ಪೂರ್ಣ ಹೆಸರು ಮತ್ತು ವಿಳಾಸ | |
| ಯಾವ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅರ್ಜಿ ಸಲ್ಲಿಸಲಾಗಿತ್ತೋ ಆ ಆಧಿಕಾರಿಯ ಇಲಾಖೆಯ ವಿಳಾಸ | |
| ಮಾಹಿತಿ ಕೋರಿದ ವಿಷಯ | |
| ಮಾಹಿತಿಕೋರಿ ಸಲ್ಲಿಸಿದ ಅರ್ಜಿಯನ್ನು ಸಾ.ಮಾ.ಅಧಿಕಾರಿ ಸ್ವೀಕರಿಸಿದ ದಿನಾಂಕ | |
| ಅರ್ಜಿ ಶುಲ್ಕ ಪಾವತಿ ಮಾಡಿರುವ ವಿವರ ಲಗತ್ತಿಸಿದೆಯೇ | ದಾಖಲೆಗಳು- ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಲ್ಲಿಸಿದ ಅರ್ಜಿ, ಮನವಿ ಪತ್ರ ಸಲ್ಲಿಸಿದ್ದರೆ ಅದರ ಪ್ರತಿ ಇವುಗಳನ್ನು ಲಗತ್ತಿಸಬೇಕು. |
| ಪ್ರಥಮ ಮೇಲ್ಮನವಿ ಸಲ್ಲಿಸಲು ಕಾರಣ | |

ಸ್ಥಳ : . . . . . . . . . .

ದಿನಾಂಕ : . . . . . 　　　　　　　　　　　　　　　ಮೇಲ್ಮನವಿದಾರರ ಸಹಿ

ಮಾಹಿತಿ ಹಕ್ಕು ಅಧಿನಿಯಮ 2005 ರ ಅಡಿಯಲ್ಲಿ ದೂರು ಸಲ್ಲಿಸುವ ಅರ್ಜಿ

(ದಾಖಲೆಗಳನ್ನು 3 ಪ್ರತಿಗಳಲ್ಲಿ ಸಲ್ಲಿಸುವುದು)

| | |
|---|---|
| ಫಿರ್ಯಾದುದಾರರ ಹೆಸರು ಮತ್ತು ವಿಳಾಸ | |
| ಯಾವ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿರುದ್ಧ ದೂರು ದಾಖಲಾಗುತ್ತಿದ್ದೇಯೋ ಆ ಆಧಿಕಾರಿಯ ಇಲಾಖೆಯ ವಿಳಾಸ | |
| ದೂರುದಾರರ ಕೋರಿಕೆಯನ್ನು ಪರಿಗಣಿಸದಿದ್ದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಆರಂಭದಲ್ಲಿ ಸಲ್ಲಿಸಿದ ಮಾಹಿತಿ ಕೋರಿಕೆಯ ಅರ್ಜಿ ನಕಲು ಪ್ರತಿಯನ್ನು ಲಗತ್ತಿಸುವುದು. | |
| ಪ್ರಥಮ ಮೇಲ್ಮನವಿ ಪ್ರಾಧೀಕಾರಕ್ಕೆ ಮೇಲ್ಮನವಿ ಅರ್ಜಿ ಸಲ್ಲಿಸಿದಲ್ಲಿ ಅದರ ನಕಲು ಪ್ರತಿ ಲಗತ್ತಿಸುವುದು ಮತ್ತು ಅದರ ವಿವರದ ದಾಖಲೆ | |
| ಈಗಿನ ದೂರಿನಲ್ಲಿ ಕೇಳಲಾದ ಪರಿಹಾರ | |
| ಈಗಿನ ದೂರು ಮತ್ತು ಪರಿಹಾರ ಕೇಳಲು ಇರುವ ಕಾರಣಗಳು<br>(ಆಧಾರಗಳು/ದಾಖಲೆಗಳನ್ನು ಲಗತ್ತಿಸುವುದು) | ಲಗತ್ತುಗಳು– ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಲ್ಲಿಸಿದ ಅರ್ಜಿ, ಮೋದಲ ಮೇಲ್ಮನವಿ ಅರ್ಜಿ, ಮನವಿ ಪತ್ರ ಸಲ್ಲಿಸಿದ್ದರೆ ಅದರ ಪ್ರತಿ ಇವುಗಳನ್ನು ದಾಖಲೆಗಳನ್ನು ಲಗತ್ತಿಸಬೇಕು. |
| ಸದರಿ ದೂರಿನೊಂದಿಗೆ ಲಗತ್ತಿಸಲಾಗಿರುವ ದಾಖಲೆಗಳ ಸೂಚಿ | |
| ದೂರನ್ನು ಸಾಬೀತುಪಡಿಸಲು ಅಥವಾ ಒಪ್ಪಲು ಅವಶ್ಯವೆಂದು ಭಾವಿಸಲು ಸಾಧ್ಯವಾದ ಇತರೆ ಯಾವುದಾದರೂ ಮಾಹಿತಿಗಳು/ವಿವರ | |

ಸ್ಥಳ : . . . . . . . . .

ದಿನಾಂಕ : . . . .                                        ದೂರುದಾರರ ಸಹಿ

**ಮಾಹಿತಿ ಹಕ್ಕು ಕಾಯಿದೆಯಡಿಲ್ಲಿ ಅರ್ಜಿ ಸಲ್ಲಿಸ ಬೇಕಾಗಿರುವ ಕಚೇರಿ**

| **ಸಾರ್ವಜನಿಕ ಮಾಹಿತಿ ಅಧಿಕಾರಿ** | **ಗೊತ್ತು ಪಡಿಸಿದ ಕಾಲಮಿತಿ** | **ಮೊದಲ ಮೇಲ್ಮನವಿ ಅಧಿಕಾರಿ** | **ಗೊತ್ತು ಪಡಿಸಿದ ಕಾಲಮಿತಿ** | **2ನೇ ಮೇಲ್ಮನವಿ ಅಥವಾ ದೂರುಸಲ್ಲಿಸಲು** |
|---|---|---|---|---|
| **ಸಾರ್ವಜನಿಕ ಮಾಹಿತಿ ಅಧಿಕಾರಿ** | 30 ದಿನಗಳು | **ಮೇಲ್ಮನವಿ ಅಧಿಕಾರಿ** | 30 ದಿನಗಳು | ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಕರ್ನಾಟಕ ರಾಜ್ಯ ಮಾಹಿತಿ ಆಯೋಗ ಗೇಟ್ ನಂ 1, 3ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ಬೀದಿ, ಬೆಂಗಳೂರು *Phone: 080-22371191, 080-22371193.* *www.kic.gov.in* |

**"ಸಕಾಲ ಯೋಜನೆ"**

**ಕರ್ನಾಟಕ ರಾಜ್ಯದಲ್ಲಿನ ನಾಗರೀಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿದೇಯಕ. ನಿಗದಿತ ಸೇವೆಗಳು ನಿಗದಿತ ಸಮಯದೊಳಗೆ ದೊರೆಯದೆ ಇದ್ದರೆ ಈ ಕೆಳಗಿನ ಅಧಿಕಾರಿಗಳಿಗೆ ದೂರುಸಲ್ಲಿಸಬಹುದು.**

| **ಯೋಜನೆ/ಸೌಲಭ್ಯ** | **ಹೆಸರಿಸಲಾದ ಅಧಿಕಾರಿ** | **ಗೊತ್ತು ಮಾಡಿದ ಕಾಲಮಿತಿ** | **ಸಕ್ಷಮ ಅಧಿಕಾರಿ** | **ಗೊತ್ತು ಮಾಡಿದ ಕಾಲಮಿತಿ** | **ಮೇಲ್ಮನವಿ ಅಧಿಕಾರಿ** | **ಗೊತ್ತು ಮಾಡಿದ ಕಾಲಮಿತಿ** |
|---|---|---|---|---|---|---|
| ಇಂದಿರಾಗಾಂಧಿ ರಾಷ್ಟೀಯ ವೃದ್ಧಾಪ್ಯೆ ವೇತನ | ಉಪ ತಹಶೀಲ್ದಾರರು/ ತಹಶೀಲ್ದಾರರು | 70 ಕೆಲಸದ ದಿನಗಳು | ಸಹಾಯಕ ಆಯುಕ್ತರು | 15 ಕೆಲಸದ ದಿನಗಳು | ಜಿಲ್ಲಾಧಿಕಾರಿ | 15 ಕೆಲಸದ ದಿನಗಳು |

**ಸಕಾಲ ಮಾಹಿತಿ ಮತ್ತು ದೂರುಗಳಿಗೆ ಸಂಪರ್ಕಿಸಿ**

| | | | |
|---|---|---|---|
| 15 ಸಂಖ್ಯೆಯುಳ್ಳ **ಸ್ವೀಕೃತಿ ರಸೀದಿಯನ್ನು** ಕೇಳಿ ಪಡೆಯುವುದು, ಅದು ನಿಮ್ಮ ಹಕ್ಕು | ಸಕಾಲ ಇಲಾಖೆಯ ಉಚಿತ ಸಹಾಯವಾಣಿ ಸಖ್ಯೆ: 080–44554455 ಕಚೇರಿ ಸಂಖ್ಯೆಗಳು 080–22353985, 22032825 | ಎಸ್ ಎಮ್ ಎಸ್ ಮುಖಾಂತರ ಅರ್ಜಿಯ/ ಸೇವೆಯ ಪ್ರಸುತ್ತ ಸ್ಥಿತಿಯನ್ನು ತಿಳಿಯುವ ಬಗ್ಗೆ ಜಿಎಸ್‌ಸಿ ಎಂದು ಟೈಪ್ ಮಾಡಿ ಒಂದು ಸ್ಪೇಸ್ ಬಿಟ್ಟು ನಿಮ್ಮ 15ಸಂಖ್ಯೆಗಳನ್ನು ನಮೂದಿಸಿ ನಂತರ 9731979899 ಅಥವಾ 7738299899ಗೆ ಕಳುಹಿಸುವುದು. ಇಮೇಲ್: *sakala@nic.in* ವೆಬ್ ಸೈಟ್:*www.sakala.kar.nic.in* | **ಸಕಾಲಕ್ಕೆ ಸೇವೆ ನೀಡದೆ** ಇದ್ದರೆ ನೌಕರರು ನಾಗರೀಕರಿಗೆ ರೂ.20/– ರಿಂದ ರೂ 500/– ರೂ ವರೆಗೆ ಪರಿಹಾರ ಶುಲ್ಕವನ್ನು ತನ್ನ ಸಂಬಳದಿಂದ ಭರಿಸುವುದು. |

**ಲಂಚ ಕೇಳುತ್ತಿದ್ದರೆ, ಅನಗತ್ಯ ವಿಳಂಭ, ಮಾಹಿತಿ ನೀಡದ್ದಿದರೆ ಇವರನ್ನು ಸಂಪರ್ಕಿಸಿ**

ಲೋಕಾಯುಕ್ತ ಕಚೇರಿ ವಿಳಾಸ

ಲೋಕಯುಕ್ತರು

ಬಹುಮಹಡಿಗಳ ಕಟ್ಟಡ, ಡಾ// ಬಿ.ಆರ್ ಅಂಬೇಡ್ಕರ್ ವಿಧಿ, ಬೆಂಗಳೂರು –01

ಪೋನ್ ನಂಬರ್: 080–22257013

ಸಹಾಯವಾಣಿ ಸಂಖ್ಯೆಗಳು:155320, 18004255320

ಇಮೇಲ್ – *kla-reg@nic.in*